ಸಂಪಾದಕರು : ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶನಿವಾರ, ನವೆಂಬರ್ 30, 2024

ಸಂಪುಟ : 51 ಸಂಚಿಕೆ : 197 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com


ಚಿತ್ರ: ಜಗಳಿ ಪ್ರಕಾಶ್



# ಸಂಪುಟ ಪುನರ್‌ರಚನೆ ಸದ್ಯಕ್ಕಿಲ್ಲ

## ದೆಹಲಿಯಲ್ಲಿ ವರಿಷ್ಠರ ಭೇಟಿ ನಂತರ ಸಿದ್ಧರಾಮಯ್ಯ, ಡಿಕೆಶಿ ಸ್ಪಷ್ಟನೆ

**ಹಾಸನದಲ್ಲಿ ಡಿ. 5ರಂದು ಕಾಂಗ್ರೆಸ್ ಪಕ್ಷ ಹಾಗೂ ಹಿಂದುಳಿದ ವರ್ಗಗಳ ಒಕ್ಕೂಟದ ಆಶ್ರಯದಲ್ಲಿ ಸ್ವಾಭಿಮಾನಿ ಸಮಾವೇಶ**

ಬೆಂಗಳೂರು, ನ. 29 - ಸಂಪುಟ ವಿಸ್ತರಣೆ, ಇಲ್ಲವೇ ಪುನರ್ ರಚನೆ ಸದ್ಯಕ್ಕಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ದೆಹಲಿಯಲ್ಲಿ ಭೇಟಿ ಮಾಡಿದ ನಂತರ ಪ್ರತ್ಯೇಕವಾಗಿ ಉಭಯ ನಾಯಕರು ಮಾಧ್ಯಮಗಳಿಗೆ ಈ ವಿಷಯ ತಿಳಿಸಿದ್ದಾರೆ.

ವಿಸ್ತರಣೆ ಇಲ್ಲವೇ ಪುನರ್ ರಚನೆ ಮಾಧ್ಯಮದವರ ಸೃಷ್ಟಿ, ನೀವೇ ನಮ್ಮ ಮಂತ್ರಿಮಂಡಲಕ್ಕೆ ಯಾರು ಸೇರುತ್ತಿದ್ದಾರೆ, ಯಾರನ್ನು ಕೈಬಿಡುತ್ತಿದ್ದಾರೆ ಎಂಬ ಪಟ್ಟಿಯನ್ನು ನೀವೇ ಸೃಷ್ಟಿಸಿದ್ದೀರಿ ಎಂದಿದ್ದಾರೆ.

ನಮ್ಮಲ್ಲಿ ಇದ್ಯಾವುದೂ ಚರ್ಚೆ ಆಗಿಲ್ಲ, ಪಕ್ಷದ ವರಿಷ್ಠರ ಮುಂದೆಯೂ ಪ್ರಸ್ತಾಪ ಮಾಡಿಲ್ಲ. ಆದರೆ, ನಾಗೇಂದ್ರ ಮಂತ್ರಿಮಂಡಲ ಸೇರುತ್ತಾರೆ, ಅದೂ ಈಗ ಸದ್ಯಕ್ಕಿಲ್ಲ ಎಂದು ಸ್ಪಷ್ಟಪಡಿಸಿದರು.

ಹಾಸನದಲ್ಲಿ ಡಿಸೆಂಬರ್ 5ರಂದು ಕಾಂಗ್ರೆಸ್ ಪಕ್ಷ ಹಾಗೂ ಹಿಂದುಳಿದ ವರ್ಗಗಳ ಒಕ್ಕೂಟದ ಆಶ್ರಯದಲ್ಲಿ ಸ್ವಾಭಿಮಾನಿ ಸಮಾವೇಶ ಆಯೋಜಿಸಲಾಗಿದೆ.

ಸಮಾವೇಶಕ್ಕೆ ಕೆಪಿಸಿಸಿ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿ, (3ನೇ ಪುಟಕ್ಕೆ)

# ಕೊಮಾರನಹಳ್ಳಿ ಕೆರೆಯಲ್ಲಿ ವೈಭವದ ತೆಪ್ಪೋತ್ಸವ

**ಗಮನ ಸೆಳೆದ ಮೆರವಣಿಗೆ, ತೆಪ್ಪೋತ್ಸವಕ್ಕೆ ಜನಸಾಗರ**

ಮಲೇಬೆನ್ನೂರು, ನ.29- ಕೊಮಾರನಹಳ್ಳಿ ಗ್ರಾಮದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿಯ ಐತಿಹಾಸಿಕ ಕೆರೆಯಲ್ಲಿ 15 ವರ್ಷಗಳ ಬಳಿಕ ಶುಕ್ರವಾರ ಸಂಜೆ ದೀಪೋತ್ಸವ ಮತ್ತು ತೆಪ್ಪೋತ್ಸವವು ಅಪಾರ ಜನರ ಸಮ್ಮುಖದಲ್ಲಿ ಜರುಗಿತು.

ಶ್ರೀ ರಂಗನಾಥ ಆಶ್ರಮದ ಶ್ರೀ ಶಂಕರಲಿಂಗ ಭಗವಾನರು 1951 ರಲ್ಲಿ ಕೆರೆ ತುಂಬಿದಾಗ ಮೊದಲ ಬಾರಿಗೆ ತೆಪ್ಪೋತ್ಸವ ಆಚರಿಸಿದ್ದರು. ನಂತರ 2ನೇ ಬಾರಿಗೆ 2009 ರಲ್ಲಿ ಕೆರೆ ಭರ್ತಿಯಾಗಿ ಕೋಡಿ ಸಂದರ್ಭದಲ್ಲಿ ಸರ್ವ ದೇವತೆಗಳ ಸಮ್ಮುಖದಲ್ಲಿ ಕೊಮಾರನಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿ ಅದ್ದೂರಿಯಾಗಿ ತೆಪ್ಪೋತ್ಸವ ನಡೆಸಿದ್ದರು.

ಶುಕ್ರವಾರ ಸಂಜೆ 3ನೇ ಬಾರಿಗೆ ನಡೆದ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ದೀಪೋತ್ಸವ ಮತ್ತು ತೆಪ್ಪೋತ್ಸವ ಹೊಸ ಇತಿಹಾಸ ನಿರ್ಮಿಸಿತು.

ತೆಪ್ಪೋತ್ಸವದ ಅಂಗವಾಗಿ ಗ್ರಾಮದ ಮುಖ್ಯ ವೃತ್ತದಿಂದ ಕೆರೆವರೆಗೆ ನಡೆದ (2ನೇ ಪುಟಕ್ಕೆ)

# ಪ್ರಧಾನಿ ಮೋದಿ ಭೇಟಿ ಮಾಡಿದ ಸಿಎಂ, ಡಿಸಿಎಂ

**ಮೇಕೆದಾಟು, ಭದ್ರಾ ಮೇಲ್ದಂಡೆಗಾಗಿ ಮನವಿ, 2ನೇ ಸ್ಥರದ ನಗರಗಳಿಗಾಗಿ 10 ಸಾವಿರ ಕೋಟಿ ರೂ. ಬಿಡುಗಡೆಗೂ ಮನವಿ ಸಲ್ಲಿಕೆ**

ಬೆಂಗಳೂರು, ನ. 29 - ಕೃಷ್ಣರಾಜ ಜಲಾಶಯಕ್ಕೆ ಸಮಾನಾಂತರವಾಗಿ ಮೇಕೆದಾಟು ಸಮೀಪ ಅಣೆಕಟ್ಟೆ ನಿರ್ಮಾಣ, ಮಹದಾಯಿ, ಕಳಸಾ-ಬಂಡೂರಿ ಯೋಜನೆಗಳಿಗೆ ಅನುಮತಿ ದೊರಕಿಸಿ ಕೊಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮನವಿ ಮಾಡಿದ್ದಾರೆ. ಕರ್ನಾಟಕ ಅತ್ಯಂತ ವೇಗವಾಗಿ ನಗರೀಕರಣಗೊಳ್ಳುತ್ತಿರುವ ರಾಜ್ಯವಾಗಿದ್ದು, 13 ನಗರಪಾಲಿಕೆಗಳನ್ನು ಹೊರತುಪಡಿಸಿ, 2ನೇ ಸ್ಥರದ ನಗರಗಳ ಅಭಿವೃದ್ಧಿಗೆ ಹೆಚ್ಚಿನ ಬಂಡವಾಳ ನೀಡಿ ಎಂದು ಕೋರಿದ್ದಾರೆ.

ಕೇಂದ್ರದಿಂದ ಬರಬೇಕಿರುವ ಅನುದಾನ ಸೇರಿದಂತೆ, ರಾಜ್ಯದ ಅಭಿವೃದ್ಧಿ ಯೋಜನೆಗಳ ಪಟ್ಟಿಯನ್ನೇ ದೆಹಲಿಯಲ್ಲಿಂದು ಪ್ರಧಾನಿ ಅವರಿಗೆ ಉಭಯ ನಾಯಕರು ಸಲ್ಲಿಸಿ, (3ನೇ ಪುಟಕ್ಕೆ)

# ವಿಜಯೇಂದ್ರ : ದೇವಾಲಯಗಳ ಯಾತ್ರೆ

**ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ರೇಣುಕಾಚಾರ್ಯ ಸೇರಿದಂತೆ 50ಕ್ಕೂ ಹೆಚ್ಚು ಬಿಜೆಪಿ ಮಾಜಿ ಶಾಸಕರಿಂದ ಯಾತ್ರೆ**

ಬೆಂಗಳೂರು, ನ. 29 - ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಸಮರ ಸಾರಿರುವ ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತವರ ತಂಡದ ವಿರುದ್ಧ ಕ್ರಮಕ್ಕೆ ಆಗ್ರಹಿಸಿ, ಪಕ್ಷ ಸಂಘಟನೆ, ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕೈ ಬಲಪಡಿಸಲು ನಿಷ್ಠರ ಬಣ ದೇವಾಲಯಗಳ ಯಾತ್ರೆ ಆರಂಭಿಸಿದೆ.

ನಗರದಲ್ಲಿಂದು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಸೇರಿದಂತೆ 50ಕ್ಕೂ ಹೆಚ್ಚು ಬಿಜೆಪಿ ಮಾಜಿ ಶಾಸಕರು ಹಾಗೂ ಮುಖಂಡರು ಕಟ್ಟಾ ಅವರ ಮನೆಯಿಂದ ದೇವಾಲಯ ಯಾತ್ರೆ ಆರಂಭಿಸಿದರು.

ಕೋಲಾರದ ಕುರುಡುಮಲೆ ಗಣೇಶ ದೇವಾಲಯದಲ್ಲಿ ಪೂಜೆ ಸಲ್ಲಿಸಿ, ಪಕ್ಷದ ಕಾರ್ಯಕರ್ತರ ಸಭೆ ನಡೆಸಿ, ಚಾಮುಂಡೇಶ್ವರಿ ದೇವಿ ದರ್ಶನಕ್ಕೆ ಮೈಸೂರಿಗೆ ತೆರಳಿದರು.

ದೇವಾಲಯಗಳ ಯಾತ್ರೆ ತೆರಳುವುದಕ್ಕೂ ಮುನ್ನ ಕಟ್ಟಾ ಅವರ ಮನೆಯಲ್ಲಿ ಸೇರಿದ್ದ (2ನೇ ಪುಟಕ್ಕೆ)

# 'ಬ್ಯಾಲೆಟ್ ಪೇಪರ್' ಉತ್ತಮ: ಸಿಎಂ

ನವದೆಹಲಿ, ನ.29- ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ತಿರುಚಬಹುದು. ಹಾಗಾಗಿ, ದೇಶದಲ್ಲಿ ಇವಿಎಂಗಳನ್ನು ರದ್ದುಗೊಳಿಸಿ ಬ್ಯಾಲೆಟ್ ಪೇಪರ್‌ಗೆ ಮರಳುವುದೇ ಉತ್ತಮ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಇಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ಇವಿಎಂ ಕಾರ್ಯನಿರ್ವಹಣೆ ಬಗ್ಗೆ ಅನುಮಾನವಿದೆ. ಸಾರ್ವಜನಿಕರ ಮನದಲ್ಲಿ ಮೂಡಿರುವ ಸಂದೇಹ ನಿವಾರಣೆಗೆ ಇವಿಎಂಗಳ ವ್ಯವಸ್ಥೆ ರದ್ದುಗೊಳಿಸಿ ಪೇಪರ್ (2ನೇ ಪುಟಕ್ಕೆ)

# ಸರ್ಕಾರಿ ನೌಕರರಿಗಾಗಿ ಇ.ವಿ. ಮೇಳ

ಬೆಂಗಳೂರು, ನ. 29 - ಇಲೆಕ್ಟ್ರಿಕ್ ವಾಹನಗಳ ಬಳಕೆ ಉತ್ತೇಜಿಸಲು ಸರ್ಕಾರಿ ನೌಕರರಿಗಾಗಿಯೇ ವಿಶೇಷ 'ಇವಿ' ಮೇಳ ಆಯೋಜಿಸಲು ನಿರ್ಧರಿಸಲಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಸರ್ಕಾರದ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ನಿರ್ದೇಶನದಂತೆ ಮೊದಲ ಹಂತ ದಲ್ಲಿ ಸಚಿವಾಲಯದ ನೌಕರಿಗಾ ಗಿಯೇ 2025ರ ಜನವರಿಯಲ್ಲಿ ವಿಶೇಷ ಇವಿ ಮೇಳ ಆಯೋಜಿಸಲಾ ಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು. ಇವಿ ದ್ವಿಚಕ್ರ ವಾಹನ ಬಳಕೆಗೆ ಒತ್ತು ನೀಡುವಲಿ ಹಾಗೂ ಪರಿಸರ ಸ್ನೇಹಿ ಇವಿ ವಾಹನಗಳ ಬಳಕೆ ಪ್ರಯೋಜನ ಗಳ ಮಾಹಿತಿ ನೀಡುವ ಜೊತೆಗೆ ಸರ್ಕಾರಿ ನೌಕರ ರಿಗೆ ಮಾರಾಟಗಾರ ರಿಂದ ರಿಯಾ ಯಿತಿ ದರದಲ್ಲಿ ಇವಿ ದ್ವಿಚಕ್ರ ವಾಹನ ಗಳನ್ನು ಒದಗಿಸುವುದು ಈ ಮೇಳದ ಉದ್ದೇಶವಾಗಿದೆ. ಪ್ರದ ರ್ಶನ ಸ್ಥಳ ದಲ್ಲೇ ಪ್ರಾಯೋಗಿಕವಾಗಿ ವಾಹನ ಓಡಿಸಲು ವ್ಯವಸ್ಥೆ ಮಾಡ ಲಾಗುವುದು ಎಂದು ಹೇಳಿದರು.


## ಅಭಿನಂದನೆಗಳು



ಮಹಾನಗರ ಪಾಲಿಕೆ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ
**69ನೇ ಕನ್ನಡ ರಾಜ್ಯೋತ್ಸವ ಪ್ರಶಸ್ತಿ**
ಪುರಸ್ಕೃತರಾದ
**ಶ್ರೀ ಬಿ. ಚನ್ನವೀರಯ್ಯ**
ಜಿಲ್ಲಾ ವರದಿಗಾರರು, ದಾವಣಗೆರೆ ಕನ್ನಡಿಗ,
**ಶ್ರೀ ಎ.ಎನ್. ನಿಂಗಪ್ಪ**
ಉಪ ಸಂಪಾದಕರು, ಸಂಯುಕ್ತ ಕರ್ನಾಟಕ
**ಶ್ರೀ ಹೆಚ್.ಎನ್. ಪ್ರಕಾಶ್**
ಜಿಲ್ಲಾ ವರದಿಗಾರರು, ವಾರ್ತಾಭಾರತಿ,
ಇವರಿಗೆ ಅಭಿನಂದನೆಗಳು.

ದಾವಣಗೆರೆ ಕನ್ನಡಿಗ, ಮಹಿಳಾ ಕೂಗು ಪತ್ರಿಕೆಯ ಸಂಪಾದಕರು ಹಾಗೂ ಸಿಬ್ಬಂದಿ ವರ್ಗದವರು.

## ಚನ್ನಗಿರಿ ಮನೆತನದ 'ಭೀಷ್ಮ'ಗೆ ಹಾರ್ದಿಕ ಅಭಿನಂದನೆಗಳು



ದಾವಣಗೆರೆ ಮಹಾನಗರ ಪಾಲಿಕೆಯಿಂದ
69ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಇಂದು
'ನಾಗರೀಕ ಪೌರ ಸನ್ಮಾನ' ಗೌರವ ಪಡೆಯುತ್ತಿರುವ
ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸಮಾಜ ಸೇವೆಗಳಲ್ಲಿ
ನಿರಂತರವಾಗಿ ಕಠಿಣ ಪರಿಶ್ರಮದಿಂದ ಆರ್ಥಿಕ ಸಹಕಾರ,
ಸಹಯೋಗ ನೀಡುತ್ತಿರುವ, ಬಡ ಮಕ್ಕಳಿಗೆ ವಿದ್ಯಾರ್ಥಿ ವೇತನ,
ಉಚಿತ ಕಲ್ಯಾಣ ಮಂಟಪ, ವಿದ್ಯಾರ್ಥಿಗಳಿಗೆ ಉಚಿತ ವಸತಿಗೃಹ
ಹೀಗೆ ನೂರಾರು ದಾನ-ಧರ್ಮ ಮಾಡಿರುವ
ಚನ್ನಗಿರಿ ಮನೆತನದ ಭೀಷ್ಮ,
ಆರ್ಯವೈಶ್ಯ ಸಮಾಜದ ಹಿರಿಯರಾದ

**ಶ್ರೀ ಚನ್ನಗಿರಿ ವಿರೂಪಾಕ್ಷಪ್ಪ**

ಇವರಿಗೆ ಹಾರ್ದಿಕ ಅಭಿನಂದನೆಗಳು.
ತಮ್ಮ ಸೇವೆಗೆ ಇನ್ನಷ್ಟು ಗೌರವಗಳು ಸಿಗಲಿ ಹಾಗೂ ತಾವು ಶತಾಯುಷಿಗಳಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಚನ್ನಗಿರಿ
ಆರ್.ಸತ್ಯನಾರಾಯಣ,
ರಂಗಮಹಲ್,
ಪಿ.ಜೆ.ಬಡಾವಣೆ, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಯುತ ರಾಜನಹಳ್ಳಿ ರಮಾನಂದ** ರವರು

ದಿನಾಂಕ : 28-11-2024 ರ ಬೆಳಿಗ್ಗೆ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತಿಮ ದರ್ಶನ ದಿ: 30-11-2024 ರ ಶನಿವಾರದಂದು ಬೆಳಿಗ್ಗೆ 9.00 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಅವರ ಸ್ವಗೃಹ 'ಜ್ಯೋತಿ ನಿಲಯ' ಎ.ವಿ.ಕೆ. ಕಾಲೇಜು ರಸ್ತೆ, ಪಿ.ಜೆ. ಬಡಾವಣೆಯಲ್ಲಿ.

ಇಂತಿ ದುಃಖತಪ್ತ ಕುಟುಂಬ :
ಶ್ರೀಮತಿ ಪ್ರೇಮಾ ರಮಾನಂದ
ಹೆಣ್ಣು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಕುಟುಂಬ ವರ್ಗ

## 12ನೇ ವರ್ಷದ ಪುಣ್ಯಸ್ಮರಣೆ



ಜನನ : 11.08.1928 ಮರಣ : 30.11.2012

**ದಿ|| ಶ್ರೀ ಬಿ. ಮೈಲಪ್ಪನವರು**
ನಿವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್

ನೀವು ನಮ್ಮನ್ನಗಲಿ ಇಂದಿಗೆ ಹನ್ನೆರಡು ವರ್ಷಗಳಾದವು. ಭಗವಂತನಲ್ಲಿ ನಿಮ್ಮ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಸದಾ ನಿಮ್ಮ ಸ್ಮರಣೆಯಲ್ಲಿ ಇರುವ,

ಪತ್ನಿ: ಶ್ರೀಮತಿ ಜಿ. ನಾಗರತ್ನಮ್ಮ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬೈರಜ್ಜರ ಮನೆತನದವರು. 08192 450685

## ಜಿ.ಎನ್. ಕುಬೇರಪ್ಪ ನಿಧನ



ದಾವಣಗೆರೆ ತಾಲ್ಲೂಕು ಸುಲ್ತಾನಿಪುರ ಗ್ರಾಮದ ವಾಸಿ
ಜಿ.ಎನ್. ರತ್ನಮ್ಮನವರ ಪತಿ
**ಜಿ.ಎನ್. ಕುಬೇರಪ್ಪ**
ಇವರು ದಿನಾಂಕ 29.11.2024ರ ಶುಕ್ರವಾರ ಮಧ್ಯಾಹ್ನ 2.20ಕ್ಕೆ ನಿಧನರಾದರು. ಮೃತರಿಗೆ 77 ವರ್ಷ ವಯಸ್ಸಾಗಿತ್ತು.
ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.11.2024ರ ಶನಿವಾರ ಮಧ್ಯಾಹ್ನ 12ಕ್ಕೆ ದಾವಣಗೆರೆ ತಾಲ್ಲೂಕು ಸುಲ್ತಾನಿಪುರದ ಮೃತರ ತೋಟದಲ್ಲಿ ನೆರವೇರಿಸಲಾಗುವುದು.
ದುಃಖತಪ್ತ ಕುಟುಂಬ ವರ್ಗ : 99165 25669, 94485 34797

## ಆರನೇ ವರ್ಷದ ಪುಣ್ಯಸ್ಮರಣೆ



**ದಿ|| ಪ್ರೊ|| ಶ್ರೀ ಡಿ.ಬಿ. ನಾಗನಗೌಡ್ರು**
ನಿಧನ: 30-11-2018

"ನಮ್ಮ ಬದುಕಿಗೆ ಕ್ರಿಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲ ನಮ್ಮೆಲ್ಲರನ್ನು ಬಿಟ್ಟು ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿ ತಾಯಿಯ ಮೇಲೆ ಪ್ರತಿಬಿಂಬಿಸಲಿ"
ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮೆಲ್ಲರ ಮೇಲಿರಲಿ.
ತಮ್ಮ ನೆನಪಿನಲ್ಲಿ ಪಯಣಿಸುತ್ತಿರುವ
ಧರ್ಮಪತ್ನಿ: ಶ್ರೀಮತಿ ಪುಷ್ಪ ಡಿ.ಎನ್.
ಪುತ್ರರು – ಸೊಸೆಯಂದಿರು
ಶ್ರೀಮತಿ ಡಾ|| ಅನುಮಪ ಮತ್ತು ಡಾ|| ಕಿರಣ್ ಡಿ.ಎನ್.
ಶ್ರೀಮತಿ ದೀಪಾ ಮತ್ತು ಶ್ರೀ ಶಿವನಗೌಡ ಡಿ.ಎನ್.
ಶ್ರೀಮತಿ ಹರ್ಷಿತಾ ಮತ್ತು ಡಾ|| ಧನಂಜಯ್ ಡಿ.ಎನ್.
ಮೊಮ್ಮಕ್ಕಳು: ದಿಶಾ, ವಿಶ್ವಾಸ್, ಹೃದಯ್, ನೀಲ್, ನಿಧಿ, ಶೌರ್ಯ.
ವಿಶ್ವಾಸ್ ಸೈಂಟಿಫಿಕ್ ಕಂಪನಿ, ದಾವಣಗೆರೆ
ವಿಶ್ವಾಸ್ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್, ದಾವಣಗೆರೆ
ವಿಶ್ವಾಸ್ ಲೈಫ್‌ಕೇರ್, ಹದಡಿ ರಸ್ತೆ, ದಾವಣಗೆರೆ
ಕಿಯಾನ್ ಹೆಲ್ತ್‌ಕೇರ್ ಪ್ರಾಡಕ್ಟ್ಸ್, ದಾವಣಗೆರೆ

# ಭಯವನ್ನುಂಟು ಮಾಡುತ್ತಿರುವ ಧರ್ಮ ಮತ್ತು ರಾಜಕೀಯ

## ಹರಪನಹಳ್ಳಿ : ವಿದ್ಯಾರ್ಥಿ ಕವಿಗೋಷ್ಠಿ ಕಾರ್ಯಕ್ರಮದಲ್ಲಿ ಕವಿ ಹುರಕಡ್ಲಿ ಶಿವಕುಮಾರ್ ವ್ಯಾಕುಲತೆ



ಹರಪನಹಳ್ಳಿ, ನ. 28- ಧರ್ಮ ಮತ್ತು ರಾಜಕೀಯ ಮನುಷ್ಯರಲ್ಲಿ ಭಯ ಉಂಟು ಮಾಡಿದರೆ, ಕಾವ್ಯ ಮನುಷ್ಯರನ್ನು ನಿರ್ಭೀತರನ್ನಾಗಿ ಮಾಡುತ್ತದೆ ಎಂದು ಬಾಚಿಗೊಂಡನಹಳ್ಳಿ ಕವಿ, ಸಾಹಿತಿ ಹುರಕಡ್ಲಿ ಶಿವಕುಮಾರ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಜನದನಿ ಸಾಹಿತ್ಯ ವೇದಿಕೆ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಯುವ ವಿದ್ಯಾರ್ಥಿ ಕವಿಗೋಷ್ಠಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಮೃದ್ಧ ಸಾಹಿತ್ಯಿಕ ವಾತಾವಾರಣವಿರುವ ಕರುನಾಡಿನಲ್ಲಿ ಅನೇಕ ಕವಿಗಳು, ಸಾಹಿತಿಗಳು ಕನ್ನಡದ ಕಂಪನ್ನು ಚೆಲ್ಲಿದ್ದಾರೆ. ನಾವು ಭಾಷೆಯನ್ನು ಹೊತ್ತು ತಿರುಗುವುದಲ್ಲ. ಭಾಷೆಯೇ ನಮ್ಮನ್ನು ಆಡಿಸುತ್ತದೆ. ನಮ್ಮನ್ನು ಉತ್ಸಾಹಿಗಳನ್ನಾಗಿ ಮಾಡಲು ಸಹಕಾರ ನೀಡುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಕೆ.ಉಚ್ಚೆಂಗೆಪ್ಪ ಮಾತನಾಡಿ, ಸಮಾಜವನ್ನು ತಿದ್ದುವ ಕೆಲಸವನ್ನು ಕಾವ್ಯಗಳು ಮಾಡುತ್ತವೆ. ಇತ್ತೀಚಿಗೆ ಸದಾ ಮೊಬೈಲ್‌ನಲ್ಲಿ ಮುಳುಗಿ ಓದುವ ಬರೆಯುವ ಅಭ್ಯಾಸ ಕಡಿಮೆ ಮಾಡಿಕೊಂಡಿರುವ ವಿದ್ಯಾರ್ಥಿಗಳು ನಾಡು- ನುಡಿ, ನೆಲ, ಜಲ, ಸಾಹಿತ್ಯ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಕೊಳ್ಳಬೇಕು ಎಂದರು.

ಹಿಂದೆ ಕವಿಗಳು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಜನರಲ್ಲಿ ಜಾಗೃತಿ ಮೂಡಿಸಿ, ಕಾವ್ಯದ ಮೂಲಕ ಸಮಾಜ ತಿದ್ದಿದ್ದರು. ಅನ್ಯಾಯಕ್ಕೆ ಒಳಗಾದವರಿಗೆ, ದಮನಿತರಿಗೆ ಧ್ವನಿಯಾಗಿದ್ದರು. ಆದರೆ, ಈಗ ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವ ಕವಿಗಳ ಸಂಖ್ಯೆ ಕಡಿಮೆಯಾಗಿದೆ. ಸಾಹಿತ್ಯ ನಮ್ಮೆಲ್ಲರ ನಿತ್ಯದ ಬದುಕಿನ ಅವಿಭಾಜ್ಯ ಅಂಗ. ಕಾಲ ಬದಲಾದಂತೆ ಸಾಹಿತ್ಯದ ಅಭಿವ್ಯಕ್ತಿ, ಅಭಿರುಚಿಯೂ ಬದಲಾಗಿದೆ. ಆದರೆ, ಕವಿತೆಗಳು ಈಗಲೂ ಆಪ್ತ ಹಾಗೂ ಚೇತೋಹಾರಿ ಅನಿಸುತ್ತದೆ ಎಂದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಡಾ.ಕೆ.ಸತೀಶ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಹಿತ್ಯದ ಸಂಘಟನೆ ಕಟ್ಟುವ ಸಾಹಸದ ಕೆಲಸದಲ್ಲಿ ಯುವ ಕವಿಗಳನ್ನು ಒಂದೆಡೆ ಸೇರಿಸಿ ಕಾವ್ಯ ವಾಚನ ಮಾಡುವ ಕೆಲಸ ಅಮೋಘವಾಗಿದ್ದು ವಿದ್ಯಾರ್ಥಿಗಳು ಅಂಕ ಗಳಿಕೆಗೆ ಮಾತ್ರ ಸೀಮಿತವಾಗದೆ ಕ್ರೀಡೆ ಸಾಹಿತ್ಯ, ಸಂಸ್ಕೃತಿ, ಜನಪದ ಕಲೆ ಮತ್ತು ರಂಗಭೂಮಿಯಲ್ಲಿ ವಿದ್ಯಾರ್ಥಿಗಳು ತೊಡಗಿಸಿ ಕೊಳ್ಳಬೇಕು ಎಂದರು.

ಸಾಹಿತಿ ಇಸ್ಮಾಯಿಲ್ ಎಲಿಗಾರ್ ಮಾತನಾಡಿ, ಎದೆಗೆ ಬಿದ್ದ ಅಕ್ಷರ, ಭೂಮಿಗೆ ಬಿದ್ದ ಬೀಜ ವ್ಯರ್ಥವಾಗುವುದಿಲ್ಲ ಕೊರಳಿನ ಬಾಷೆಗಿಂತ ಕರುಳಭಾಷೆ ಶ್ರೇಷ್ಠವಾಗಿದ್ದು, ಪುಸ್ತಕಗಳು ಧರ್ಮಗ್ರಂಥಗಳಾಗಬೇಕು. ನಿಮ್ಮ ಕಣ್ಣು ಮುಂದೆ ಭಾರತವಿದ್ದು ಜಾತಿರೋಗದ ಭೀತಿ ಕಳಚಿ ನೀತಿವಂತರಾಗಬೇಕು. ಸಹಬಾಳ್ವೆ, ಸಹಕಾರದಿಂದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ದಕ್ಕೆ ಬರದಂತೆ ಜೀವನ ನಡೆಸಬೇಕಾಗಿದೆ ಎಂದರು.

ನಿವೃತ್ತ ಎಸ್.ಬಿ.ಐ ಅಧಿಕಾರಿ ಗಣೇಶ್ ಹವಾಲ್ದಾರ್ ಮಾತನಾಡಿ, ವೃತ್ತಿಗಿಂತ ಪ್ರವೃತ್ತಿ ತೃಪ್ತಿಯನ್ನು ನೀಡುತ್ತದೆ. ಓದು ನಮ್ಮದಾಗಬೇಕು ಅದಕ್ಕೆ ಪೂರಕವಾಗಿ ಸತತ ಅಭ್ಯಾಸ ಮಾಡಬೇಕು. ಮನೆಯ ಚೌಕಟ್ಟಿನೊಳಗೆ ಅಮ್ಮನ ಭಾಷೆ, ಭಾವನೆ ಜೊತೆಗೆ ಮಾತೃಭಾಷೆ ಬರುತ್ತದೆ. ನಮ್ಮ ಭಾಷೆ ಪ್ರೀತಿ ಮಾಡುವುದರ ಜೊತೆಗೆ ಇತರೆ ಭಾಷೆಗಳನ್ನು ದ್ವೇಷಿಸಬಾರದು. ಭಾವನೆಗಳನ್ನು ಹಂಚಿಕೊಳ್ಳಲು ಭಾಷೆ ಅಡ್ಡಿಯಾಗದು ಎಂದರು.

ಕನ್ನಡ ಸಾಹಿತ್ಯ ಪರಿಷತ್ತು ಮಾಜಿ ಅಧ್ಯಕ್ಷರಾದ ಡಿ.ರಾಮನಮಲಿ, ಸುಭದ್ರಮ್ಮ ಮಾಡ್ಲಿಗೇರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಅಧ್ಯಕ್ಷ, ಬಸವರಾಜ ಸಂಗಪ್ಪನವರ್, ಸಾಹಿತಿ ಬಾಗಳಿ ರಾಜಶೇಖರ್ ಬಣಕಾರ್, ಉಪನ್ಯಾಸಕರಾದ ಎನ್.ಎಂ.ನಾಗರಾಜ, ಬುಳ್ಳಪ್ಪ, ಕೆ.ಎಂ.ಉಚ್ಚರಾಯಪ್ಪ, ಮಲ್ಲೇಶಪ್ಪ, ಪುನೀತರಾಜ್, ಶಂಭುಲಿಂಗಪ್ಪ, ಶಿಕ್ಷಕ ಸಿ. ಗಂಗಾಧರ್, ಶೇಖರ್ ನಾಯ್ಕ, ನಿಲಯ ಪಾಲಕ ಎನ್. ಜಿ.ಬಸವರಾಜ, ಅರಸಿಕೆರೆ ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ಎಂ.ಸುರೇಶ, ಹೇಮಣ್ಣ ಮೋರಗೆರೆ, ಮಲ್ಲೇಶಪ್ಪ ಸೇರಿದಂತೆ ಇತರರು ಇದ್ದರು.

# ರಾಣೇಬೆನ್ನೂರಿಗೆ ಇಂದು ರಂಭಾಪುರಿ ಜಗದ್ಗುರುಗಳು



ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳವರು ಹಿರೇಮಠದಲ್ಲಿ ಇಂದು ನಡೆಯಲಿರುವ ಧರ್ಮ ಸಮಾರಂಭದಲ್ಲಿ ಪಾಲ್ಗೊಳ್ಳುವರು ಎಂದು ಶ್ರೀ ಪೀಠದ ಸಿ.ಎಚ್.ಬಾಳನಗೌಡ್ರ ತಿಳಿಸಿದ್ದಾರೆ.

# 'ಬ್ಯಾಲೆಟ್ ಪೇಪರ್' ಉತ್ತಮ: ಸಿಎಂ

**(1ನೇ ಪುಟದಿಂದ)** ಬ್ಯಾಲೆಟ್ ಮರು ಪರಿಚಯಿಸುವ ತುರ್ತು ಅಗತ್ಯವಿದೆ' ಎಂದರು. ಅನೇಕ ಅಭಿವೃದ್ಧಿ ಹೊಂದಿದ ದೇಶಗಳು ಪೇಪರ್ ಬ್ಯಾಲೆಟ್ ಅನ್ನು ಬಳಸುತ್ತಿವೆ. ಭಾರತವೂ ಅದನ್ನೇ ಬಳಸಬೇಕು ಎಂದರು.

# ನಗರದಲ್ಲಿ ಇಂದು ರಾಜ್ಯೋತ್ಸವ

ಕರ್ನಾಟಕ ಜನಶಕ್ತಿ ಮತ್ತು ಕಾಯಕಜೀವಿ ಕಟ್ಟಡ ಕಾರ್ಮಿಕರ ಸಂಘ ಜಿಲ್ಲಾ ಸಮಿತಿ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಮತ್ತು ಕಾನೂನು ಅರಿವು ಕಾರ್ಯಕ್ರಮವು ಇಂದು ಸಂಜೆ 4.15ಕ್ಕೆ ಕುಂದವಾಡ ರಸ್ತೆಯ ಕಾಡಪ್ಪರ ಬಾವಿ ಹತ್ತಿರ ನಡೆಯಲಿದೆ.

# ಪಾಲಿಕೆಯಲ್ಲಿನ ಇಂದಿನ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ನಟ ಡಾಲಿ ಧನಂಜಯ್

ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಮತ್ತು ಪತ್ರಕರ್ತರ ಸಂಯು ಕ್ತಾಶ್ರಯದಲ್ಲಿ ಮಹಾ ನಗರಪಾಲಿಕೆ ಆವರಣದ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗಮಂದಿರದಲ್ಲಿ ಇಂದು 69ನೇ ಕನ್ನಡ ರಾಜ್ಯೋತ್ಸವ ನಡೆಯಲಿದೆ ಎಂದು ಪಾಲಿಕೆಯ ಮೇಯರ್ ಕೆ. ಚಮನ್‌ಸಾಬ್ ತಿಳಿಸಿದರು.



ಇಂದು ಸಂಜೆ 5.30ರ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ಶಾಸಕ ಶಾಮನೂರು ಶಿವಶಂಕರಪ್ಪ, ದಾನಿಗಳಾದ ಚನ್ನಗಿರಿ ವಿರುಪಾಕ್ಷಪ್ಪ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ, ಡಾ.ಎಂ.ಎಸ್. ಎಲಿ, ರೈತ ಹೋರಾಟಗಾರ ನರಸಿಂಹಪ್ಪ, ನಿವೃತ್ತ ಮುಖ್ಯ ಶಿಕ್ಷಕ ಕೆ.ಇಮಾಂ ಅವರುಗಳಿಗೆ 'ನಾಗರಿಕ ಪೌರ ಸನ್ಮಾನ' ನಡೆಯಲಿದೆ.

ಹಿರಿಯ ಸಾಹಿತಿ ರಂಜಾನ ದರ್ಗಾ ಅವರು ಉಪನ್ಯಾಸ ನೀಡುವರು. ಮುಖ್ಯ ಅತಿಥಿಗಳಾಗಿ ಶಾಸಕ ಶಿವಗಂಗಾ ಬಸವರಾಜ, ಮಾಜಿ ಸಚಿವ ಎಚ್.ಆಂಜನೇಯ, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ನಟ ಡಾಲಿ ಧನಂಜಯ, ಕಾನಿಪ ಜಿಲ್ಲಾಧ್ಯಕ್ಷ ಇ.ಎಂ.ಮಂಜುನಾಥ, ಹಿರಿಯ ಪತ್ರಕರ್ತ ಬಿ.ಎನ್.ಮಲ್ಲೇಶ್, ಕನ್ನಡ ಪರ ಸಂಘಟನೆಗಳ ಟಿ. ಶಿವಕುಮಾರ್, ಕೆ.ಜಿ. ಶಿವಕುಮಾರ್, ಜಿ. ಮಂಜುಳಾ ಭಾಗವಹಿಸುವರು.

# ಕೊಮಾರನಹಳ್ಳಿ ಕೆರೆಯಲ್ಲಿ ವೈಭವದ ತೆಪ್ಪೋತ್ಸವ





**(1ನೇ ಪುಟದಿಂದ)** ಕೊಮಾರನಹಳ್ಳಿ, ಮಲೇಬೆನ್ನೂರು, ಹರಳಹಳ್ಳಿ, ದಿಬ್ಬದಹಳ್ಳಿ, ಎರೆಹಳ್ಳಿ, ಹಾಲಿವಾಣ, ಕೊಪ್ಪ, ತಿಮ್ಲಾಪುರ ಗ್ರಾಮಗಳ ಗ್ರಾಮದೇವತೆಗಳ ಮೆರವಣಿಗೆಗೆ ಉಡುಪಿಯ ಚಂಡಿ ಮೇಳ, ಡೊಳ್ಳು, ಗೊಂಬೆ ಕುಣಿತ, ಕೀಲು ಕುಣಿತ, ಹಲಗೆ, ಜಾಂಜ್ ಮೇಳ ಸೇರಿದಂತೆ ವಿವಿಧ ಕಲಾ ಮೇಳಗಳು ಮೆರಗು ತಂದವು.

ಮೆರವಣಿಗೆ ನಂತರ ಎಲ್ಲಾ ದೇವರುಗಳನ್ನು ಹರಳಹಳ್ಳಿ ಆಂಜನೇಯ ಸ್ವಾಮಿ ಕಾರ್ಣಿಕ ಹೇಳುವ ಸ್ಥಳದಲ್ಲಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಯಿತು.

ನಂತರ ಕೊಮಾರನಹಳ್ಳಿಯ ಶ್ರೀ ಲಕ್ಷ್ಮಿ ರಂಗನಾಥಸ್ವಾಮಿ, ಶ್ರೀ ಆಂಜನೇಯ ಸ್ವಾಮಿ ಹಾಗೂ ಶ್ರೀ ಬೀರಲಿಂಗೇಶ್ವರ ಸ್ವಾಮಿ ಉತ್ಸವ ಮೂರ್ತಿಗಳನ್ನು ಹೂವಿನಿಂದ ಅಲಂಕಾರ ಮಾಡಿದ್ದ ತೆಪ್ಪದಲ್ಲಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿದ ಬಳಿಕ ಭಕ್ತರು ಗೋವಿಂದ ಗೋವಿಂದ ಎಂಬ ಜಯಘೋಷಗಳೊಂದಿಗೆ ಪುಷ್ಪಾರ್ಚನೆ ಮಾಡುವ ಮೂಲಕ ತೆಪ್ಪೋತ್ಸವಕ್ಕೆ ಚಾಲನೆ ನೀಡಲಾಯಿತು.

ಸಂಜೆ 6.10ಕ್ಕೆ ಪ್ರಾರಂಭವಾದ ತೆಪ್ಪೋತ್ಸವವು ಕೆರೆಯಲ್ಲಿ ಸುತ್ತಾಡಿ ನಂತರ ಕೆರೆ ಕೋಡಿ ಸ್ಥಳಕ್ಕೆ ಬಂದು ಮುಕ್ತಾಯಗೊಂಡಿತು. ವಿದ್ಯುತ್ ಅಲಂಕಾರದಿಂದ ಇಡೀ ಗ್ರಾಮ ಝುಗಮಗಿಸುತ್ತಿತ್ತು.

ಈ ವೇಳೆ ಸಿಡಿಸಿದ ಪಟಾಕಿಗಳು ಬಾನಂಗಳದಲ್ಲಿ ಬಣ್ಣ ಬಣ್ಣದ ಚಿತ್ತಾರ ಮೂಡಿಸಿ ಜನರ ಗಮನ ಸೆಳೆದವು. ತೆಪ್ಪೋತ್ಸವ ಮುಕ್ತಾಯಗೊಳ್ಳುವ ಸಮಯದಲ್ಲಿ ಸಮುದಾಯ ಭವನದ ಮುಂಭಾಗ ಜನರ ಸಂಖ್ಯೆ ಹೆಚ್ಚಾಗಿ ನೂಕು ನುಗ್ಗಲು ಉಂಟಾಯಿತು. ಸಮುದಾಯ ಭವನದಲ್ಲಿ ಮಧ್ಯಾಹ್ನ 12 ಗಂಟೆಯಿಂದ ತಡರಾತ್ರಿವರೆಗೆ ನಿರಂತರವಾಗಿ ಅನ್ನ ಸಂತರ್ಪಣೆ ವ್ಯವಸ್ಥೆ ಮಾಡಲಾಗಿತ್ತು.

ತೆಪ್ಪೋತ್ಸವದಲ್ಲಿ ಭಾಗವಹಿಸಿದ್ದ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರು, ದೇವಸ್ಥಾನದಲ್ಲಿ ದೀಪ ಹಚ್ಚುವ ಮೂಲಕ ದೀಪೋತ್ಸವಕ್ಕೆ ಚಾಲನೆ ನೀಡಿದರು. ನಂತರ ಕೆರೆಯಲ್ಲಿ ದೀಪ ಸೇವೆ ಸಲ್ಲಿಸಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಈ ಕೆರೆಗೆ ತುಂಗಭದ್ರಾ ನದಿಯಿಂದ ನೀರು ಹರಿಸುವ ಕಾಮಗಾರಿ ಪೂರ್ಣಗೊಂಡಿದ್ದು, ಇನ್ನು ಮುಂದೆ ನಿರಂತರವಾಗಿ ನದಿ ನೀರು ಕೆರೆಗೆ ಹರಿಯಲಿದೆ.

ಈ ಕೆರೆಯನ್ನು ಅಭಿವೃದ್ಧಿಪಡಿಸಿ ಪ್ರವಾಸಿ ತಾಣವನ್ನಾಗಿ ಮಾಡುವ ಬಗ್ಗೆ ಗ್ರಾಮಸ್ಥರು ಮನವಿ ಮಾಡಿದ್ದು, ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಪ್ರವಾಸೋದ್ಯಮ ಸಚಿವರನ್ನು ಭೇಟಿ ಮಾಡಿ ಚರ್ಚಿಸುತ್ತೇನೆಂದು ಪ್ರಭಾ ಭರವಸೆ ನೀಡಿದರು.

ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್, ಹರಿಹರ ಕ್ಷೇತ್ರದ ಮಾಜಿ ಶಾಸಕರಾದ ಎಸ್. ರಾಮಪ್ಪ, ಹೆಚ್.ಎಸ್. ಶಿವಶಂಕರ್, ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಹನಗವಾಡಿ ವಿರೇಶ್, ಬಿ. ಚಿದಾನಂದಪ್ಪ, ಬಿ.ಎಂ. ವಾಗೀಶ್‌ಸ್ವಾಮಿ, ಬೆಣ್ಣೆಹಳ್ಳಿ ಹಾಲೇಶಪ್ಪ, ಚಂದ್ರಶೇಖರ್ ಪೂಜಾರ್, ಎ. ಗೋವಿಂದ ರೆಡ್ಡಿ, ಹನಗವಾಡಿ ಕುಮಾರ್, ವೈ. ದ್ಯಾವಪ್ಪರೆಡ್ಡಿ, ಜಿ. ಮಂಜುನಾಥ್ ಪಟೇಲ್, ಐರಣಿ ಅಣ್ಣಪ್ಪ, ಎಸ್. ಜಿ. ಪರಮೇಶ್ವರಪ್ಪ, ಕುಂಬಳೂರು ವಿರೂಪಾಕ್ಷಪ್ಪ, ಜಿಗಳಿ ಆನಂದಪ್ಪ, ಹಿಂಡಸಘಟ್ಟಿ ಲಿಂಗರಾಜ್, ಶ್ರೀಮತಿ ಅರ್ಚನಾ ಬೆಳ್ಳೂಡಿ ಬಸವರಾಜ್, ನಿಖಿಲ್ ಕೊಂಡಜ್ಜಿ, ಗೋವಿನಹಾಳ್ ರಾಜಣ್ಣ, ಶಾಸಕ ಬಿ. ಪಿ. ಹರೀಶ್ ಅವರ ಪುತ್ರ ಅರ್ಜುನ್, ಪ್ರವಾಸೋದ್ಯಮ ಇಲಾಖೆಯ ಸಹಾಯಕ ಸಹಾಯಕ ನಿರ್ದೇಶಕರಾದ ಶ್ರೀಮತಿ ಕಾವ್ಯ, ಉಪತಹಶೀಲ್ದಾರ್ ಆರ್. ರವಿ, ಗ್ರಾಮ ಲೆಕ್ಕಾಧಿಕಾರಿ ಅಣ್ಣಪ್ಪ, ಗ್ರಾಮದ ಹುಗ್ಗಿ ರಂಗನಾಥ್, ಐರಣಿ ಮಹೇಶ್ವರಪ್ಪ, ರಾಮಣ್ಣ ಸ್ವಾಮಿ, ಕೆ. ಉಜ್ಜೇಶ್, ಎಸ್.ಎಂ. ಮಂಜುನಾಥ್, ಮಡಿವಾಳರ ಬಸವರಾಜ್, ಸಿ. ರಂಗನಾಥ್, ದಾನಪ್ಪ ಅರುಣ್, ನವೀನ್ ಪಟೇಲ್, ಪರಮೇಶ್ವರನಾಯ್ಕ್, ಪಾರಿ ರಂಗಪ್ಪ, ಮತ್ತು ಮಲೇಬೆನ್ನೂರಿನ ಸುರೇಶ್‌ಶಾಸ್ತ್ರಿ, ಚಿಟ್ಟಕ್ಕಿ ನಾಗರಾಜ್, ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಉದಯೋನ್ಮುಖ ನಟ ಶಾಮನೂರಿನ ಪೃಥ್ವಿ ಕೂಡಾ ಪಾಲ್ಗೊಂಡು ಗಮನ ಸೆಳೆದರು. ಪಿಎಸ್‌ಐ ಪ್ರಭು ಕೆಳಗಿನಮನೆ ಅವರ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ತೆಪ್ಪೋತ್ಸವದ ಅಂಗವಾಗಿ ಪ್ರವಾಸೋದ್ಯಮ ಇಲಾಖೆಯಿಂದ 2 ಬೋಟ್‌ಗಳನ್ನು ಕೆರೆಯಲ್ಲಿ ಬಿಡಲಾಗಿತ್ತು.

# ವಿಜಯೇಂದ್ರ : ದೇವಾಲಯಗಳ ಯಾತ್ರೆ

**(1ನೇ ಪುಟದಿಂದ)** ನಿಷ್ಠರು, ವಕ್ಫ್ ಒತ್ತುವರಿ ತೆರವು ವಿರುದ್ಧದ ಹೋರಾಟದ ಹೆಸರಿನಲ್ಲಿ ಬಿಜೆಪಿ ನಾಯಕತ್ವದ ವಿರುದ್ಧ ಬಂಡಾಯ ಸಾರಿರುವ ಬಸನಗೌಡ ಪಾಟೀಲ್ ಯತ್ನಾಳ್, ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ ಸೇರಿದಂತೆ ಎಲ್ಲ ನಾಯಕರ ಪಕ್ಷ ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿ ರಾಜ್ಯಾದ್ಯಂತ ಕಾರ್ಯಕರ್ತರ ಜೊತೆ ಹೋರಾಟ ನಡೆಸಲು ಸಭೆ ತೀರ್ಮಾನಿಸಿತು.

ಪಕ್ಷದ ಹೈಕಮಾಂಡ್ ನಿರ್ಧಾರಕ್ಕೆ ಎಲ್ಲರೂ ಬದ್ಧರಾಗಿ ಇರಬೇಕಾಗುತ್ತದೆ. ಆದರೆ, ಹಿರಿಯ ನಾಯಕರಾದ ಯತ್ನಾಳ್, ಜಾರಕಿಹೊಳಿ ಮೊದಲಾದವರು ಗೊಂದಲ ಮೂಡಿಸುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಆಪಾದಿಸಿದರು.

ವಕ್ಫ್ ಒತ್ತುವರಿ ತೆರವು ವಿರುದ್ಧ ಜನಾಂದೋಲನ ಮೂಡಿಸಲು ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಪ್ರತಿಪಕ್ಷ ನಾಯಕರಾದ ಆರ್. ಅಶೋಕ್ ಮತ್ತು ಛಲವಾದಿ ನಾರಾಯಣಸ್ವಾಮಿ ನೇತೃತ್ವದಲ್ಲಿ ಮೂರು ತಂಡಗಳು ಡಿಸೆಂಬರ್ 4ರಿಂದ ರಾಜ್ಯಾದ್ಯಂತ ಪ್ರವಾಸ ನಡೆಸಲಿವೆ. ಇದರಲ್ಲಿ ಎಲ್ಲ ಕಾರ್ಯಕರ್ತರು ಪಾಲ್ಗೊಳ್ಳಬೇಕು. ಆದರೆ, ಯತ್ನಾಳ್ ನೇತೃತ್ವದ ತಂಡ ಪರ್ಯಾಯವಾಗಿ ಯಾತ್ರೆ ಆರಂಭಿಸಿ ಗೊಂದಲ ಸೃಷ್ಟಿಸಿದೆ.

ಈ ಗೊಂದಲ ನಿವಾರಿಸುವ ದೃಷ್ಟಿಯಿಂದ ಯತ್ನಾಳ್ ಯಾತ್ರೆಗೆ ತಕ್ಷಣವೇ ಕಡಿವಾಣ ಹಾಕಬೇಕು. ಪಕ್ಷ ವಿರೋಧಿ ಚಟುವಟಿಕೆ ನಡೆಸುತ್ತಿರುವ ನಾಯಕರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹೇರಲಾಗುವುದು.

ಪಕ್ಷದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿದ್ಯಮಾನಗಳು ಗೊಂದಲಕ್ಕೆ ಕಾರಣವಾಗಿವೆ. ಆದರೆ, ಕಾರ್ಯಕರ್ತರು ಗೊಂದಲದಲ್ಲಿ ಸಿಲುಕದೆ ಪಕ್ಷದ ಅಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ಮುನ್ನಡೆಯಬೇಕು ಎಂದು ಮನವಿ ಮಾಡಿದರು.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 28.11.2024ರ ಗುರುವಾರದಂದು ನಮ್ಮೆಲ್ಲರನ್ನು ಆಗಲಿದ

**ಎಸ್.ಸಿ.ಎಸ್. ಪೇರೆಂಟ್ಸ್ ಅಸೋಸಿಯೇಷನ್ ರಿಜಿಸ್ಟರ್‌ನ ಗೌರವ ಕಾರ್ಯದರ್ಶಿಗಳೂ, (ಮಹಾತ್ಮ ವಿದ್ಯಾಶಾಲೆ)**

ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷರೂ, ದಾವಣಗೆರೆಯ ಪ್ರಸಿದ್ಧ ವಾಣಿಜ್ಯೋದ್ಯಮಿಗಳೂ, ರಾಜನಹಳ್ಳಿ ಮನೆತನದ ಹಾಗೂ ಆರ್ಯವೈಶ್ಯ ಸಮಾಜದ ಹಿರಿಯರೂ, ದಾನಿಗಳೂ ಆದ

## ಶ್ರೀ ರಾಜನಹಳ್ಳಿ ರಮಾನಂದ್

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ ಶಕ್ತಿಯನ್ನು ಆ ಭಗವಂತನು ನೀಡಲೆಂದು ಪ್ರಾರ್ಥಿಸುತ್ತೇವೆ.

**ಅಧ್ಯಕ್ಷರು, ಸಹ ಕಾರ್ಯದರ್ಶಿ ಹಾಗೂ ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ**

**ಎಸ್.ಸಿ.ಎಸ್. ಪೇರೆಂಟ್ಸ್ ಅಸೋಸಿಯೇಷನ್ ರಿಜಿಸ್ಟರ್, ದಾವಣಗೆರೆ.**

# ನಗರದ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಇಂದು ಕಾರ್ತಿಕೋತ್ಸವ

ಪಿ.ಬಿ.ರಸ್ತೆ ಕರೂರು ರಸ್ತೆ ಕ್ರಾಸ್ ಬಳಿ ಇರುವ ಪಂಚದೇವಸ್ಥಾನಗಳ ಮಹಾಕ್ಷೇತ್ರದಲ್ಲಿ ಶ್ರೀ ಶನೇಶ್ವರಸ್ವಾಮಿ ಕಾರ್ತಿಕೋತ್ಸವ ಪ್ರಯುಕ್ತ ಇಂದು ಬೆಳಿಗ್ಗೆ 6.30ಕ್ಕೆ ಪಂಚದೇವರುಗಳಿಗೆ ಶ್ರೀಕಾಶಿವಿಶ್ವನಾಥಲಿಂಗ ಹಾಗೂ ಶ್ರೀ ಶನೇಶ್ವರಸ್ವಾಮಿಗಳಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ರದ್ರಾಭಿಷೇಕ, ವಿಶೇಷ ಅಲಂಕಾರ ಬೆಳಿಗ್ಗೆ 9 ರಿಂದ ಶ್ರೀ ಶನೇಶ್ವರ ಸ್ವಾಮಿ ಸಹಿತ ಪಂಚದೇವರುಗಳ ಪಲ್ಲಕ್ಕಿ ಉತ್ಸವ ಇರುತ್ತದೆ. ಸಂಜೆ 6.30ಕ್ಕೆ ಪಂಚದೇವಸ್ಥಾನಗಳ ಆವರಣದಲ್ಲಿ ಶ್ರೀ ಶನೇಶ್ವರಸ್ವಾಮಿ ಕಾರ್ತೋಕೋತ್ಸವ ನಡೆಯಲಿದೆ.

# ಮಹಾಲಿಂಗಮ್ಮ ರಕ್ಕಸಗಿ ನಿಧನ



ದಾವಣಗೆರೆ ನಗರದ ಹುಬ್ಬಳ್ಳಿ ಚೌಡಪ್ಪನ ಗಲ್ಲಿ ವಾಸಿ ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ದಿ॥ ಆರ್. ಅಯ್ಯಣ್ಣ ರಕ್ಕಸಗಿ ಇವರ ಧರ್ಮಪತ್ನಿ ಶ್ರೀಮತಿ ಮಹಾಲಿಂಗಮ್ಮ ರಕ್ಕಸಗಿ (90) ಇವರು ದಿನಾಂಕ: 29-11-2024 ರ ಶುಕ್ರವಾರ ರಾತ್ರಿ 10.15ಕ್ಕೆ ನಿಧನರಾದರು. ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ: 30-11-2024 ರ ಶನಿವಾರ ಮಧ್ಯಾಹ್ನ 2.00 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

# ಅಣಜಿಮಠದ ಶ್ರೀ ಎ.ಎಂ.ಸಣ್ಣಬಸವರಾಜಯ್ಯ ನಿಧನ



ದಾವಣಗೆರೆ ಸಿಟಿ #524/52,
1ನೇ ಮೇನ್, 2ನೇ ಕ್ರಾಸ್,
ಎ.ಜಿ.ಎಂ. ಲೇಔಟ್ ಆವರಗೆರೆ ವಾಸಿ
ದಿ. ಕಮಲಮ್ಮನವರ ಪತಿ

**ಶ್ರೀ ಎ.ಎಂ. ಸಣ್ಣಬಸವರಾಜಯ್ಯ** (69)

ಇವರು ದಿನಾಂಕ 29.11.2024ರ ಶುಕ್ರವಾರ ಸಂಜೆ 4 ಗಂಟೆಗೆ ನಿಧನರಾದರು. ಓರ್ವ ಪುತ್ರ, ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.11.2024ರ ಶನಿವಾರ ಅಣಜಿ ಗ್ರಾಮದ ರುದ್ರಭೂಮಿಯಲ್ಲಿ ಮಧ್ಯಾಹ್ನ 12.30ಕ್ಕೆ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 82771 69234**

# ನಗರದಲ್ಲಿ ಇಂದು ಕನ್ನಡ ಉತ್ಸವ, ಎಥ್ನಿಕ್ ಡೇ

ಜೈನ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆ ಅಂಗವಾಗಿ ಕನ್ನಡ ನಾಡಿನ ಸಂಸ್ಕೃತಿ ಹಾಗೂ ಹಿರಿಮೆಯನ್ನು ಪ್ರತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯ ಕ್ರಮವನ್ನು ಇಂದು ಆಚರಿಸಲಾಗುವುದು.

# ಕೆಂಪನಹಳ್ಳಿ ಮಠದ ಚಂದ್ರಶೇಖರಯ್ಯ ನಿಧನ



ದಾವಣಗೆರೆ ತಾಲ್ಲೂಕು ಆಂಜನೇಯ ನಗರ,
ಕಾರಿಗನೂರು ಕ್ರಾಸ್‌ನ ವಾಸಿ

**ಕೆಂಪನಹಳ್ಳಿ ಮಠದ ಚಂದ್ರಶೇಖರಯ್ಯ**

ಇವರು ದಿನಾಂಕ : 29.11.2024ರ ಶುಕ್ರವಾರ ಮಧ್ಯಾಹ್ನ 12.06 ಗಂಟೆಗೆ ನಿಧನರಾಗಿದ್ದಾರೆ. ಮೃತರಿಗೆ 62 ವರ್ಷ ವಯಸ್ಸಾಗಿತ್ತು. ಪತ್ನಿ, ಸಹೋದರರು ಮತ್ತು ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರವನ್ನು ದಿನಾಂಕ : 30.11.2024ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನೆರವೇರಿಸಲಾಗುವುದು.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ : 28.11.2024 ಗುರುವಾರದಂದು
ನಮ್ಮೆಲ್ಲರನ್ನು ಆಗಲಿದ ನಮ್ಮ ಟ್ರಸ್ಟ್‌ನ
ಉಪಾಧ್ಯಕ್ಷರಾದ

## ಶ್ರೀ ರಾಜನಹಳ್ಳಿ ರಮಾನಂದ್

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಹಾಗೂ
ಅವರ ಕುಟುಂಬ ವರ್ಗಕ್ಕೆ ದುಃಖ ಭರಿಸುವ
ಶಕ್ತಿಯನ್ನು ಆ ಭಗವಂತನು ನೀಡಲೆಂದು
ಪ್ರಾರ್ಥಿಸುತ್ತೇವೆ.

**ಡಾ. ಶಾಮನೂರು ಶಿವಶಂಕರಪ್ಪ,** ಗೌರವಾಧ್ಯಕ್ಷರು
**ರಮಣ್‌ಲಾಲ್ ಪಿ. ಸಂಘವಿ,** ಅಧ್ಯಕ್ಷರು
**ಪೋಪಟ್‌ಲಾಲ್ ಜೈನ್** ಗೌರವ ಕಾರ್ಯದರ್ಶಿ
**ಡಾ. ಅಂದನೂರು ರುದ್ರಮುನಿ** ಗೌರವ ಖಜಾಂಚಿ

ಟ್ರಸ್ಟಿಗಳು :

✦ ಡಾ.ಎ.ಎಸ್. ವೀರಣ್ಣ ✦ ಟಿ.ಎಸ್. ನೇಮಿನಾಥ್ ✦ ಆರ್. ರಾಮಶ್ರೇಷ್ಠಿ
✦ ಆರ್. ಪರಮೇಶ್ವರರಾವ್ ✦ ಕೆ.ಜೆ. ಶಿವಕುಮಾರ್ ✦ ಅಂದನೂರು ಮುಪ್ಪಣ್ಣ

ಮತ್ತು ಸಿಬ್ಬಂದಿ ವರ್ಗದವರು ಹಾಗೂ ವಿಶೇಷ ಮುದ್ದು ಮಕ್ಕಳು

**ಅಂಗವಿಕಲರ ಆಶಾಕಿರಣ ಟ್ರಸ್ಟ್ (ರಿ.)**
**ಅಂಗವಿಕಲರ ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ**
ಎಸ್.ಎಸ್. ಲೇ ಔಟ್ 'ಎ' ಬ್ಲಾಕ್, 5ನೇ ಕ್ರಾಸ್, ಶಾಮನೂರು ರಸ್ತೆ, ದಾವಣಗೆರೆ. ಫೋ. : 08192-222822

# ಭಾವಪೂರ್ಣ ಶ್ರದ್ಧಾಂಜಲಿ



ಮೊನ್ನೆ ನಿಧನರಾದ ದಾವಣಗೆರೆಯ ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷರು, ಪ್ರಸಿದ್ಧ ವಾಣಿಜ್ಯೋದ್ಯಮಿಗಳು, ರಾಜನಹಳ್ಳಿ ಮನೆತನದ ಹಿರಿಯರೂ, ನಮ್ಮೆಲ್ಲರ ಆಪ್ತರಾದ

## ಶ್ರೀ ರಾಜನಹಳ್ಳಿ ರಮಾನಂದ

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿಗಳು. ಶ್ರೀಯುತರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥಿಸುತ್ತೇವೆ.

* ಎಸ್.ಕೆ.ವೀರಣ್ಣ ಮತ್ತು ಕುಟುಂಬ ವರ್ಗ
* ಡಾ॥ ಉದಯ ಶಂಕರ್ ಮತ್ತು ಕುಟುಂಬ ವರ್ಗ (ಯುಎಸ್‌ಎ)
* ಆನಂದ್ ಜೆ ಶೆಟ್ರು ಮತ್ತು ಕುಟುಂಬ ವರ್ಗ, ದಾವಣಗೆರೆ

# ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಯುವನಿಧಿ

## ಅರಿವು ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆ ಅಧ್ಯಕ್ಷ ಶಾಮನೂರು ಬಸವರಾಜ್




ದಾವಣಗೆರೆ, ನ.29 - ಯುವ ಜನತೆಯ ಉಜ್ವಲ ಭವಿಷ್ಯಕ್ಕಾಗಿ ರಾಜ್ಯ ಸರ್ಕಾರವು ಯುವನಿಧಿ ಗ್ಯಾರಂಟಿ ಯೋಜನೆ ಅನುಷ್ಠಾನಗೊಳಿಸಿದ್ದು, ಇದು ಯುವ ಸಮೂಹಕ್ಕೆ ಆರ್ಥಿಕ ಬಲ ನೀಡಿದೆ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಶಾಮನೂರು ಟಿ. ಬಸವರಾಜ್ ಹೇಳಿದರು.

ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಹಾಗೂ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಾಗೂ ಎ.ವಿ. ಕಮಲಮ್ಮ ಮಹಿಳಾ ಕಾಲೇಜು ಇವರುಗಳ ಸಂಯುಕ್ತಾಶ್ರಯದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಯುವನಿಧಿ ಯೋಜನೆಯ ಅರಿವು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಡಿಪ್ಲೋಮಾ ಹಾಗೂ ಪದವಿ ಪೂರೈಸಿಕೊಂಡು ಉದ್ಯೋಗ ಸಿಗಲಾರದೆ, ಸಂದರ್ಶನಗಳಿಗೆ ಹಾಜರಾಗಲು ಹಣಕಾಸಿನ ತೊಂದರೆ ಇರುವ ಕುರಿತಂತೆ ಸರ್ಕಾರ ಗಮನಿಸಿದ್ದು, ಅಂತಹ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಈ ಯೋಜನೆಯನ್ನು ಜಾರಿಗೆ ತಂದಿದೆ. ಪ್ರಸ್ತುತ ಸ್ಪರ್ಧಾತ್ಮಕ ಯುಗದಲ್ಲಿ ಹಲವಾರು ಸ್ಪರ್ಧಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ತೆಗೆದುಕೊಳ್ಳಲು ಮತ್ತು ಅರ್ಜಿ ಸಲ್ಲಿಸಲು ಹಣಕಾಸಿನ ಅವಶ್ಯಕತೆ ತುಂಬಾ ಮುಖ್ಯ, ಹಾಗಾಗಿ ಈ ಯೋಜನೆಯನ್ನು ಎಲ್ಲರೂ ಸಮರ್ಪಕವಾಗಿ ಬಳಸಿಕೊಂಡು ಸಾರ್ಥಕ ಬದುಕು ರೂಪಿಸಿಕೊಳ್ಳಿ ಎಂದು ಕರೆ ನೀಡಿದರು.

ಜಿಲ್ಲಾ ಉದ್ಯೋಗಾಧಿಕಾರಿ ರವೀಂದ್ರ ಡಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ನಂಜಾನಾಯ್ಕ, ಅನಿಸ್ ಪಾಷ, ಸದಸ್ಯರಾದ ಶಿವಶಂಕರ ಕೈದಾಳೆ, ಡೋಲಿಚಂದ್ರು ಮತ್ತು ಎಸ್.ಎಸ್. ಗಿರೀಶ್ ಹಾಗೂ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಕಮಲ ಸೊಪ್ಪಿನ್, ಉಪನ್ಯಾಸಕರಾದ ಪಾರ್ವತಿ ಅಲ್ಲೊಳ್ಳಿ, ಆರ್.ಆರ್. ಶಿವಕುಮಾರ್, ಉಷಾ ಎಂ.ಆರ್, ಡಾ ಕವಿತಾ ಆರ್.ಜಿ. ಅನ್ವರ್ ಬೆಟಗೇರಿ, ಡಾ ರಣಧೀರ್ ಹಾಗೂ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಮಲ್ಲಿಕಾರ್ಜುನ್. ಎಸ್, ಧನಂಜಯ ಬಿ.ಎನ್. ಉಪಸ್ಥಿತರಿದ್ದರು.

# 35 ವರ್ಷ ಮೇಲ್ಪಟ್ಟ ಮಹಿಳೆಯರು ಕ್ಯಾನ್ಸರ್ ತಪಾಸಣೆ ಮಾಡಿಸಿಕೊಳ್ಳುವುದು ಅಗತ್ಯ



## ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಸಲಹೆ

ದಾವಣಗೆರೆ, ನ.29- ಜನತೆಯ ಆರೋಗ್ಯ ಸಬಲೀಕರಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು 2019 ರಿಂದ ಎಸ್. ಎಸ್. ಕೇರ್ ಟ್ರಸ್ಟ್ ಮೂಲಕ ಆಯೋಜಿಸುತ್ತಾ ಬಂದಿದ್ದೇವೆ. ನಮ್ಮೆಲ್ಲರ ನಡೆ ಆರೋಗ್ಯದ ಕಡೆ ಎಂಬ ಧ್ಯೇಯ ವಾಕ್ಯದಂತೆ ಕೆಲಸ ಮಾಡುತ್ತಾ ಬರಲಾಗುತ್ತಿದೆ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ನಗರದ ಕೆ.ಆರ್ ರಸ್ತೆಯಲ್ಲಿರುವ ಶಾಮನೂರು ಶಿವಶಂಕರಪ್ಪ ಆಸ್ಪತ್ರೆಯಲ್ಲಿ ಜಿಲ್ಲಾಡಳಿತ, ಜಿ.ಪಂ.ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣ ಕಚೇರಿ, ಎನ್ ಸಿಡಿ ಕೋಶ ಹಾಗೂ ಎಸ್.ಎಸ್. ಕೇರ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಆಯೋಜಿಸಿದ್ದ ಉಚಿತ ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಕ್ಯಾನ್ಸರ್ ತಪಾಸಣಾ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಎಲ್ಲಿ ಆರೋಗ್ಯದ ಕೊರತೆ ಇದೆ? ಜನರಿಗೆ ಯಾವ ಆರೋಗ್ಯದ ಸಮಸ್ಯೆಯಿದೆ? ಅವರಿಗೆ ಯಾವ ರೀತಿ ಆರೋಗ್ಯ ಸೇವೆ ಒದಗಿಸಬಹುದು? ಎಂಬುದು ಸೇರಿದಂತೆ ನಮ್ಮ ಸರ್ಕಾರ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಯಾವ ರೀತಿ ಕೆಲಸ ಮಾಡಬಹುದು ಎಂಬ ಬಗ್ಗೆ ಕಳೆದ ಆರು ವರ್ಷಗಳಿಂದ ಸಭೆ ನಡೆಸಿ ಸಿದ್ದತೆ ಕೈಗೊಳ್ಳಲಾಗಿದೆ. ಎಸ್ ಎಸ್ ಕೇರ್ ಟ್ರಸ್ಟ್ ನಡಿ ಈಗಾಗಲೇ ಟಿಬಿ ಬಗ್ಗೆ ಅರಿವು ಮೂಡಿಸಲು, ಚಿಕಿತ್ಸೆ ನೀಡಲು ಜಾಥಾ ಮಾಡಲಾಗಿದೆ.ಈಗಾಗಲೇ ಎಸ್ ಎಸ್ ಜನರಲ್ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಯುನಿಟ್ ಇದ್ದು, ಎಸ್.ಎಸ್. ಕೇರ್ ಟ್ರಸ್ಟ್ ನಿಂದ ಇಲ್ಲಿಯವರೆಗೂ 20 ಸಾವಿರ ಉಚಿತ ಡಯಾಲಿಸಿಸ್ ಮಾಡಲಾಗಿದೆ ಎಂದರು.

ಕ್ಯಾನ್ಸರ್ ಬಗ್ಗೆ ಸ್ಪಂದನಾ ಹೆಸರಿನಲ್ಲಿ ಕಾರ್ಯಕ್ರಮ ಮಾಡುತ್ತಾ ಬಂದಿದ್ದೇವೆ. ಸ್ಪಂದನಾ ಕಾರ್ಯಕ್ರಮದ ಮೂಲಕ ಈಗಾಗಲೇ 180 ಆಶಾ ಕಾರ್ಯಕರ್ತರೊಂದಿಗೆ ವರ್ಕ್ ಶಾಪ್ ಮಾಡಲಾಗಿದೆ. ಅವರಿಗೆ ಸ್ತನದ ಕ್ಯಾನ್ಸರ್, ಗರ್ಭದ ಕ್ಯಾನ್ಸರ್ ಯಾವ ರೀತಿ ಬರುತ್ತದೆ ಅದನ್ನು ತಡೆಯುವ ಕ್ರಮದ ಕುರಿತು ಹಾಗೂ ಆರೋಗ್ಯಕರ ಜೀವನ ಶೈಲಿ ಕುರಿತು ಆರಂಭಿಕ ಹಂತದಲ್ಲಿ ತಡೆಗಟ್ಟುವ ಬಗ್ಗೆ ಅರಿವು ಮೂಡಿಸಲಾಗಿತ್ತು ಇದರ ಜೊತೆ ಎಲ್ಲಾ ಆಶಾ ಕಾರ್ಯಕರ್ತರಿಗೂ ಕೂಡ ಆರೋಗ್ಯ ತಪಾಸಣೆ ಮಾಡಲಾಗಿತ್ತು. ಅವರಿಗೆ ಸಂಪೂರ್ಣವಾಗಿ ಮಾಹಿತಿ ನೀಡಿ ತಯಾರು ಮಾಡಲಾಗಿದೆ.

ಮಹಿಳಾ ಗುಂಪುಗಳಿಗೆ ಸ್ಪಂದನಾ ಕಾರ್ಯಕ್ರಮದ ಮಾಹಿತಿ ನೀಡಲಾಗಿದೆ. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಮೂರು ಸಾವಿರಕ್ಕೂ ಹೆಚ್ಚು ಮಹಿಳೆಯರು ಕ್ಯಾನ್ಸರ್ ತಪಾಸಣೆ ಮಾಡಿಸಿಕೊಂಡಿದ್ದಾರೆ. 30 ಕ್ಕೂ ಹೆಚ್ಚು ಅಂಗನವಾಡಿ ಕೇಂದ್ರಗಳಲ್ಲಿ ಎಸ್ ಹೆಚ್ ಇ ಗುಂಪುಗಳಿಗೆ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮೂವತ್ತೈದು ವರ್ಷ ಮೇಲ್ಪಟ್ಟ ಮಹಿಳೆಯರು ಆರೋಗ್ಯದ ದೃಷ್ಟಿಯಿಂದ ತಪಾಸಣೆ ಮಾಡಿಸುವುದು ಮುಖ್ಯ ಎಂದು ಆರೋಗ್ಯದ ಕಾಳಜಿ ಕುರಿತು ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ಡಿಹೆಚ್‌ಓ ಡಾ. ಷಣ್ಮುಖಪ್ಪ, ಡಾ.ರಾಘವನ್, ಡಾ.ದೇವರಾಜ್, ಡಾ.ಶುಕ್ಲಾಶೆಟ್ಟಿ, ಡಾ.ಸೋಮಶೇಖರ್, ಡಾ. ಅನುರೂಪ, ಡಾ.ನಂದೀಶ್ವರ್, ಡಾ.ಲತಾ ಹಾಗೂ ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

## ಪುನರ್‌ರಚನೆ ಸದ್ಯಕ್ಕಿಲ್ಲ

(1ನೇ ಪುಟದಿಂದ) ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಸಂಘಟಕರು ಆಹ್ವಾನಿಸಿದ್ದಾರೆ. ಸಮಾವೇಶ ಕುರಿತಂತೆ ಹೈಕಮಾಂಡ್‌ಗೆ ಅನಾಮಧೇಯ ಪತ್ರ ಬರೆದಿರುವ ಬಗ್ಗೆ ಮಾಹಿತಿ ಇಲ್ಲ. ಖರ್ಗೆ ಅವರೂ ಈ ಬಗ್ಗೆ ಚರ್ಚೆ ಮಾಡಲಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದರು.

ಕರ್ನಾಟಕ ಭವನದಲ್ಲಿ ಸುದ್ದಿಗಾರರೊಂದಿಗೆ ಪ್ರತ್ಯೇಕವಾಗಿ ಮಾತನಾಡಿದ ಶಿವಕುಮಾರ್, ಸಂಪುಟ ವಿಸ್ತರಣೆಯ ಸಂದರ್ಭ ಬಂದಾಗ ಆಗುತ್ತದೆ. ಈಗ ಆ ಸಮಯ ಬಂದಿಲ್ಲ. ಒಂದು ಸಚಿವ ಸ್ಥಾನ ಖಾಲಿ ಇದ್ದು ಅದನ್ನು ತುಂಬುವ ಬಗ್ಗೆ ಚರ್ಚೆ ನಡೆದಿಲ್ಲ ಎಂದರು.

ಕೆಪಿಸಿಸಿ ಅಧ್ಯಕ್ಷ ಗಾದಿ ಆಕಾಂಕ್ಷಿ ಎನ್ನುವ ಸಚಿವ ಕೆ.ಎನ್.ರಾಜಣ್ಣ ಹಾಗೂ ಸತೀಶ್ ಜಾರಕಿಹೊಳಿ ಮಾಧ್ಯಮ ಗಳ ಮುಂದೆ ರಾಜಕೀಯ ಚರ್ಚೆ ಮಾಡುವುದು ಯಾವ ಪಕ್ಷದ ವರಿಗಾಗಲೀ, ಯಾರಿಗೇ ಅಗಲಿ ಸೂಕ್ತವಾದುದಲ್ಲ. ಮಾಧ್ಯಮಗಳ ಮುಂದೆ ಮಾಡುವ ಚರ್ಚೆಯಿಂದ ರಾಜಕಾರಣ ನಡೆಯುವುದಿಲ್ಲ ಎಂದರು.

ಕಾಂಗ್ರೆಸ್‌ನ ಸಾಧನಾ ಸಮಾವೇಶ ಸಿದ್ದರಾಮಯ್ಯ ಅವರ ಸಮಾರಂಭವಾಗಿ ಬದಲಾಗಿದೆ ಎಂಬ ಕುರಿತ ಅಸಮಾಧಾನ ಪತ್ರವು ಪಕ್ಷದ ದೆಹಲಿ ಎಐಸಿಸಿ ವರಿಷ್ಠರಿಗೆ ತಲುಪಿರುವ ಬಗ್ಗೆ ನನಗೆ ಮಾಹಿತಿಯಿಲ್ಲ. ಸಮಾವೇಶ ಯಾವ ಕಾರಣಕ್ಕೆ ನಡೆಸಲಾಗುತ್ತಿದೆ ಎನ್ನುವುದರ ಬಗ್ಗೆ ಮುಖ್ಯಮಂತ್ರಿಗಳು ನನಗೆ ಈಗಾಗಲೇ ಮೊದಲೇ ತಿಳಿಸಿದ್ದಾರೆ. ಮಿಕ್ಕ ವಿಚಾರಗಳು ನನಗೆ ಗೊತ್ತಿಲ್ಲ. ಮುಖ್ಯಮಂತ್ರಿ ಹಾಗೂ ತಾವು ಭೇಟಿ ಆಗಿ ಮೂರ್ನಾಲ್ಕು ದಿನಗಳಾಗಿವೆ, ಸಮಾವೇಶದಲ್ಲಿ ಪಕ್ಷದ ಭಾಗವಹಿಸುವಿಕೆ ಖಂಡಿತ ಇದ್ದೇ ಇರುತ್ತದೆ ಎಂದು ಹೇಳಿದರು.

# ನಿವೇಶನ ರಹಿತ ಸ್ಲಂ ವಾಸಿಗಳಿಗೆ ಸೂರು ಕಲ್ಪಿಸುವಂತೆ ಸ್ಲಂ ಜನಾಂದೋಲನ ಆಗ್ರಹ



ದಾವಣಗೆರೆ, ನ.29- ನಗರದ ವಿವಿಧ ಕೊಳೆಗೇರಿಗಳ ಬಾಡಿಗೆ ಮನೆಗಳಲ್ಲಿ ವಾಸವಿರುವ ಜನರಿಗೆ ನಿವೇಶನ ಕಲ್ಪಿಸುವಂತೆ ಆಗ್ರಹಿಸಿ ಸ್ಲಂ ಜನಾಂದೋಲನ ಕರ್ನಾಟಕ ಹಾಗೂ ಸಾವಿತ್ರಿ ಬಾಫುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ಸಹಯೋಗದಲ್ಲಿ ನಿವೇಶನ ರಹಿತರು ಗುರುವಾರ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಈ ವೇಳೆ ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಡಾ.ಜಿ. ಎಂ. ಗಂಗಾಧರ ಸ್ವಾಮಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿ, ಕಳೆದ 5 ವರ್ಷಗಳಿಂದ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುತ್ತಿದ್ದರೂ ಯಾವೊಬ್ಬ ಬಡವರಿಗೂ ನಿವೇಶನ ಮಂಜೂರಾಗಿಲ್ಲ. ಜಿಎಂಐಟಿ ಕಾಲೇಜು ಸಮೀಪದ 41 ಎಕರೆ ಭೂಮಿ ಖರೀದಿಸಿದ್ದಾಗಿ ಹಿಂದಿದ್ದ ಜಿಲ್ಲಾಧಿಕಾರಿ ಗೌತಮ್ ಬಗಾದಿ ಹೇಳಿದ್ದರು. ನಂತರ ಅಲ್ಲಿ ನಿರ್ಮಿಸಿದ್ದ ನಿವೇಶನಗಳನ್ನು ಸಬಲರಿಗೇ ನೀಡಲಾಯಿತು. ಈ ಅಕ್ರಮ ಪರಿಶೀಲಿಸಲು ಕ್ರಮ ವಹಿಸಲಾಗಿದೆ ಎಂದು ನಂತರದ ಜಿಲ್ಲಾಧಿಕಾರಿ ವೆಂಕಟೇಶ್ ಹೇಳಿದ್ದರೂ ಕೊಳೆಗೇರಿ ಜನರಿಗೆ ನಿವೇಶನ ಕಲ್ಪಿಸಲಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಜನವರಿಯಲ್ಲಿ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ನಡೆಸಲಾಗಿತ್ತು. ಬಾತಿ ಬಳಿ 80 ಎಕರೆ ಭೂಮಿ ಖರೀದಿಸಿ ಕೊಳೆಗೇರಿಗಳ ನಿವೇಶನ ರಹಿತರಿಗೆ ನಿವೇಶನ ಕಲ್ಪಿಸುವ ಸಂಬಂಧ ಪಾಲಿಕೆ ಆಯುಕ್ತರಿಗೆ ನಿರ್ದೇಶನ ನೀಡುವುದಾಗಿ ಅಂದಿನ ಡಿಸಿ ಭರವಸೆ ನೀಡಿದ್ದರು. ಈ ವಿಚಾರದ ಬಗ್ಗೆ ಡಿಸಿ ಕಚೇರಿಯ ಯೋಜನಾ ನಿರ್ದೇಶಕ ಮಹಾಂತೇಶ ಅವರಿಗೆ ಜವಾಬ್ದಾರಿ ನೀಡಿದ್ದರು.

ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಪರಿಶೀಲಿಸಿ, ಉಳ್ಳವರಿಗೆ ನೀಡಲಾದ ನಿವೇಶನ ರದ್ದುಪಡಿಸಿ, ಇಲ್ಲದವರಿಗೆ ನೀಡಲು ಕ್ರಮ ವಹಿಸಬೇಕು. ಇಲ್ಲವಾದಲ್ಲಿ ನಿವೇಶನ ಸಿಗುವವರೆಗೂ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಸಂಘಟನೆಯ ಪ್ರಧಾನ ಕಾರ್ಯದರ್ಶಿ ಜಿ.ಎಚ್. ರೇಣುಕಾ ಯಲ್ಲಮ್ಮ, ಗೌರವಾಧ್ಯಕ್ಷ ಎಸ್. ಎಲ್. ಆನಂದಪ್ಪ, ಅಧ್ಯಕ್ಷ ಎಂ. ಶಬ್ಬೀರ್‌ಸಾಬ್, ಮಂಜುಳಾ, ಜಂಶಿದಾಬಾನು, ರೇಷ್ಮಾಬಾನು, ರೇಖಾ, ಅಸ್ಮಾಬಾನು, ರಾಜೇಶ್ವರಿ, ಸಲ್ಮಾಬಾನು, ಯೂಸೂಬ್‌ಸಾಬ್, ನೂರ್‌ಜಹಾನ್, ಸಿಕಂದರ್ ಇತರರು ಇದ್ದರು.

## ಗ್ಲಾಸ್‌ಹೌಸ್‌ನಲ್ಲಿ ಇಂದು ಸಾಂಸ್ಕೃತಿಕ ಕಾರ್ಯಕ್ರಮ

ದಾವಣಗೆರೆ ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಂದು ಸಂಜೆ 5.30ಕ್ಕೆ ಗಾಜಿನ ಮನೆಯಲ್ಲಿ ಸುವರ್ಣ ಸಂಭ್ರಮ ನಡೆಯಲಿದೆ. ಚಿರಂತನ ಅಕಾಡೆಮಿಯಿಂದ ನೃತ್ಯ ರೂಪಕ, ಸವಿತಾ ಗಣೇಶ್ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

## ಚಿಗಟೇರಿಯಲ್ಲಿ ಇಂದು ಶ್ರೀ ಶಿವನಾರದಮುನಿ ಸ್ವಾಮಿ ಕಾರ್ತಿಕ



ಹರಪನಹಳ್ಳಿ ತಾಲ್ಲೂಕಿನ ಚಿಗಟೇರಿ ಗ್ರಾಮದಲ್ಲಿ ಇಂದು ಸಂಜೆ ಶ್ರೀ ಶಿವ ನಾರದಮುನಿ ಸ್ವಾಮಿಯ ಕಡೇ ಕಾರ್ತಿಕೋತ್ಸವ ನಡೆಯ ಲಿದೆ. ಕಾರ್ತಿಕೋತ್ಸವದ ಪ್ರಯುಕ್ತ ಬೆಳಿಗ್ಗೆ ಶ್ರೀ ಸ್ವಾಮಿಗೆ ಪೂಜಾ ವಿಧಿ-ವಿಧಾನಗಳು ಜರುಗ ಲಿದ್ದು, ನಂತರ ವಿಜೃಂಭಣೆಯ ಕಾರ್ತಿಕ ದೀಪೋತ್ಸವ ಏರ್ಪಾಡಾಗಿದೆ ಎಂದು ಶ್ರೀ ನಾರದಮುನಿ ಸೇವಾ ಟ್ರಸ್ಟ್ ಅಧ್ಯಕ್ಷರೂ ಆಗಿರುವ ಹಿರಿಯ ಹೋಟೆಲ್ ಉದ್ಯಮಿ ಅಣಬೇರು ರಾಜಣ್ಣ ತಿಳಿಸಿದ್ದಾರೆ.

# ಪ್ರಧಾನಿ ಮೋದಿ ಭೇಟಿ ಮಾಡಿದ ಸಿಎಂ, ಡಿಸಿಎಂ

(1ನೇ ಪುಟದಿಂದ) ಕುಡಿಯುವ ನೀರಿನ ಯೋಜನೆಗೆ ಅಗತ್ಯವಿರುವ ಮೇಕೆದಾಟು ಹಾಗೂ ಕಳಸಾ-ಬಂಡೂರಿಗೆ ಜಲ ಸಂಪನ್ಮೂಲ ಮತ್ತು ಪರಿಸರ ಇಲಾಖೆಯಿಂದ ಅನುಮತಿ ಕೊಡಿಸಿ ಎಂದು ಮನವಿಯಲ್ಲಿ ಕೋರಿದ್ದಾರೆ.

ರಾಜ್ಯ ಸರ್ಕಾರ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ ಮುಂದಿನ ಮೂರು ವರ್ಷಗಳ ಅವಧಿಗೆ 2,000 ಕೋಟಿ ರೂ. ತೆಗೆದಿರಿಸಿದೆ. ಆದರೆ, ಈ ನಗರಗಳಿಗೆ ಸಮಗ್ರ ಮೂಲಸೌಕರ್ಯ ಕಲ್ಪಿಸಲು ಅನುದಾನ ಸಾಕಾಗುವುದಿಲ್ಲ.

ಆದ್ದರಿಂದ ಅಮೃತ್ ಅಥವಾ ಇನ್ನಾವುದೇ ಯೋಜನೆಯಡಿ ಕರ್ನಾಟಕಕ್ಕೆ 10,000 ಕೋಟಿ ರೂ. ಬಿಡುಗಡೆ ಮಾಡುವಂತೆ ಕೇಂದ್ರ ನಗರಾಭಿವೃದ್ಧಿ ಇಲಾಖೆಗೆ ತಾವು ನಿರ್ದೇಶನ ನೀಡಬೇಕು ಎಂದು ಮನವಿ ಸಲ್ಲಿಸಲಾಗಿದೆ.

15ನೇ ಹಣಕಾಸು ಆಯೋಗ ಕರ್ನಾಟಕ ರಾಜ್ಯಕ್ಕೆ ಸರಿಯಾದ ನ್ಯಾಯ ಒದಗಿಸುತ್ತಿಲ್ಲ ಎಂಬುದಾಗಿ ನಾವು ನಿರಂತರವಾಗಿ ಪ್ರಸ್ತಾಪಿಸುತ್ತಾ ಬಂದಿದ್ದೇವೆ. ತೆರಿಗೆ ಹಂಚಿಕೆಯಲ್ಲಿ ರಾಜ್ಯದ ಪಾಲನ್ನು ಶೇ.1ರಷ್ಟು ಕಡಿಮೆ ಮಾಡಿರುವ ಶಿಫಾರಸ್ಸನ್ನು ಹಣಕಾಸು ಇಲಾಖೆ ಸರಿಪಡಿಸಬೇಕಾಗಿದೆ.

ಹಣಕಾಸು ಆಯೋಗ ರಾಜ್ಯಕ್ಕೆ ಹಂಚಿಕೆ ಕಡಿಮೆಯಾಗಿರುವುದಕ್ಕೆ ಪರಿಹಾರವಾಗಿ 5,495 ಕೋಟಿ ರೂ. ಅನುದಾನ ಬಿಡುಗಡೆಗೆ ಮತ್ತು ಪೆರಿಫೆರಲ್ ರಿಂಗ್ ರಸ್ತೆ ಮತ್ತು ನೀರಿನ ಮೂಲಗಳ ಪುನರುಜ್ಜೀವಕ್ಕೆ 6,000 ಕೋಟಿ ರೂ. ವಿಶೇಷ ಅನುದಾನ ನೀಡುವ ಬಗ್ಗೆ ಶಿಫಾರಸ್ಸು ಮಾಡಿದೆ. ಹಣಕಾಸು ಆಯೋಗ ಕನಿಷ್ಟ ಈ ಎರಡು ಶಿಫಾರಸ್ಸುಗಳನ್ನು ಒಪ್ಪಿಕೊಳ್ಳಬೇಕಾಗಿದೆ. ನಾವು ಇನ್ನೂ 15ನೇ ಹಣಕಾಸು ಆಯೋಗದ ಅವಧಿಯಲ್ಲಿರುವುದರಿಂದ ರಾಜ್ಯಕ್ಕೆ ಹೆಚ್ಚುವರಿ ಅನುದಾನ ಒದಗಿಸಲು ಹಣಕಾಸು ಇಲಾಖೆಗೆ ನಿರ್ದೇಶನ ನೀಡುವಂತೆ ಪುನಃ ನಾನು ಮನವಿ ಮಾಡುತ್ತೇನೆ ಎಂದು ಹೇಳಿದ್ದಾರೆ.

ಅಲ್ಪಾವಧಿ ಬೆಳೆ ಸಾಲ ವಿತರಣೆಗೆ ಪ್ರಸಕ್ತ ಸಾಲಿನಲ್ಲಿ ರಾಜ್ಯಕ್ಕೆ ಒದಗಿಸಿರುವ ನಬಾರ್ಡ್ ನೆರವು ಕಡಿತಗೊಳಿಸಿರುವುದು ರೈತಾಪಿ ವರ್ಗ ಸಂಕಷ್ಟಕ್ಕೆ ಸಲುಕುವಂತೆ ಮಾಡಿದೆ. 2023-24ರ ಸಾಲಿಗೆ 5,600 ಕೋಟಿ ರೂ. ಮಂಜೂರು ಮಾಡಲಾಗಿತ್ತು. ಆದರೆ, 2024-25ರ ಸಾಲಿಗೆ 2,340 ಕೋಟಿ ರೂ. ಮಂಜೂರು ಮಾಡಲಾಗಿದೆ. ಇದರಿಂದಾಗಿ ನಬಾರ್ಡ್ ನೆರವು ಪ್ರಸಕ್ತ ಸಾಲಿಗೆ ಶೇ.58ರಷ್ಟು ಕಡಿತವಾದಂತಾಗಿದೆ.

ರಾಜ್ಯ ಹೆಚ್ಚುವರಿ ಬಡ್ಡಿ ಸಹಾಯಧನ ನೀಡದಿದ್ದರೆ ರೈತಾಪಿ ವರ್ಗದ ಆರ್ಥಿಕ ವೆಚ್ಚದ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ, ರಾಜ್ಯದ ಆರ್ಥಿಕ ಸ್ಥಿತಿಯ ಮೇಲೂ ಪರಿಣಾಮ ಬೀರಲಿದೆ. ಆದ್ದರಿಂದ ಈ ಕೂಡಲೇ ಇದನ್ನು ಪುನರ್ ಪರಿಶೀಲಿಸಿ ನಬಾರ್ಡ್ ನೆರವು ಹೆಚ್ಚಿಸಲು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಲಾಗಿದೆ. ರಾಜ್ಯದ ರೈತರು ಅಲ್ಪಾವಧಿ ಬೆಳೆ ಸಾಲ ಪಡೆಯಲು ಯಾವುದೇ ತೊಂದರೆಯಾಗದಂತೆ ತಾವು ಹಣಕಾಸು ಸಚಿವಾಲಯಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಮನವಿ ಮಾಡುತ್ತಿದ್ದೇನೆ ಎಂದು ಕೇಳಿದ್ದಾರೆ.

ಈ ಮೊದಲೇ ಮನವಿ ಮಾಡಿರುವಂತೆ ಭದ್ರಾ ಮೇಲ್ದಂಡೆ ಯೋಜನೆಗೆ 2023-24ರ ಕೇಂದ್ರ ಬಜೆಟ್‌ನಲ್ಲಿ ಅನುಮೋದನೆಯಾಗಿರುವ 5,300 ಕೋಟಿ ರೂ. ಅನುದಾನ ಬಿಡುಗಡೆ ಮಾಡುವ ಕೇಂದ್ರ ಹಣಕಾಸು ಸಚಿವರ ಭರವಸೆ ಇದುವರೆಗೆ ಈಡೇರಿಲ್ಲ. ತ್ವರಿತ ನೀರಾವರಿ ಲಾಭ ಕಾರ್ಯಕ್ರಮದಡಿ ನೆರವು ಒದಗಿಸಲು ಸಚಿವ ಸಂಪುಟದ ಟಿಪ್ಪಣಿ ಸಿದ್ಧ ಮಾಡಿರುವ ಬಗ್ಗೆ ತಿಳಿದುಬಂದಿದೆ.

ಪ್ರಸಕ್ತ ಯೋಜನೆ ಶೀಘ್ರ ಅನುಮೋದನೆಗೊಂಡಲ್ಲಿ ಭದ್ರಾ ಮೇಲ್ದಂಡೆ ಯೋಜನೆ ವ್ಯಾಪ್ತಿಗೆ ಒಳಪಡುವ ಮಧ್ಯ ಕರ್ನಾಟಕದ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಅನುಕೂಲವಾಗಲಿದೆ. ಆದ್ದರಿಂದ, ಈ ಪ್ರಸ್ತಾವನೆಗೆ ಶೀಘ್ರ ಅನುಮೋದನೆ ನೀಡಲು ತಮ್ಮಲ್ಲಿ ಮನವಿ ಮಾಡುತ್ತೇವೆ ಎಂದು ಹೇಳಿದ್ದಾರೆ.

16ನೇ ಹಣಕಾಸು ಆಯೋಗದ ಅವಧಿಯಲ್ಲಿ ಕೇಂದ್ರದ ತೆರಿಗೆ ಪಾಲಿಗೆ ಹೆಚ್ಚಿನ ದೇಣಿಗೆ ಒದಗಿಸುವ ರಾಜ್ಯಗಳಿಗೆ, ಕೇಂದ್ರದ ತೆರಿಗೆ ಪಾಲಿನಲ್ಲಿ ಭಾರೀ ಕಡಿತ ಮಾಡಿ ಶಿಕ್ಷಿಸದಂತೆ ಹಣಕಾಸು ಇಲಾಖೆ ಖಾತ್ರಿಪಡಿಸಬೇಕೆಂಬ ನಮ್ಮ ಮನವಿಗೆ ಸೂಕ್ತ ಪ್ರತಿಕ್ರಿಯೆ ದೊರಕುವ ನಿರೀಕ್ಷೆ ಇದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

# ಸೇವಾ ಸಾಧನೆಯಲ್ಲಿ ಆನಂದ ಕಂಡ ಆರ್. ರಮಾನಂದ್



ದಶಕಗಳ ಹಿಂದೆ ದಾವಣಗೆರೆ ನಗರವು ಜವಳಿ ಕೈಗಾರಿಕೆಯಲ್ಲಿ ಮುಂಚೂಣಿಯಲ್ಲಿದ್ದು, 'ಮ್ಯಾಂಚೆಸ್ಟರ್ ಆಫ್ ಮೈಸೂರ್' ಎಂದು ಕರೆಸಿಕೊಳ್ಳುವಲ್ಲಿ, ಪ್ರಸ್ತುತ 'ಕೇಂಬ್ರಿಡ್ಜ್ ಆಫ್ ಕರ್ನಾಟಕ' ಎಂದು ಶೈಕ್ಷಣಿಕವಾಗಿ ಗುರುತಿಸಿಕೊಳ್ಳುವಲ್ಲಿ ರಾಜನಹಳ್ಳಿ, ಚಿಗಟೇರಿ, ಗುಂಡಿ ಮುಂತಾದ ಮನೆತನಗಳವರ ಪಾತ್ರವೂ ಮಹತ್ತರವಾಗಿದೆ.

ಅಂತಹ ಪ್ರತಿಷ್ಠಿತ ರಾಜನಹಳ್ಳಿ ಮನೆತನದ ಭೀಮರಾಯಪ್ಪನವರ ಮಗ ಧರ್ಮಪ್ರವರ್ತ ರಾಜನಹಳ್ಳಿ ಹನುಮಂತಪ್ಪನವರ ಕಿರಿ ಸಹೋದರರಾದ ಶ್ರೀಯುತ ಲಕ್ಷ್ಮಣ ಶೆಟ್ಟರು ಶ್ರೀಮತಿ ಸುಂದರಮ್ಮ(ಧರ್ಮ ರತ್ನಾಕರ ರಾಜನಹಳ್ಳಿ ಮದ್ದೂರಾಯಪ್ಪನವರ ಕಿರಿ ಸಹೋದರ) ರವರ ಸುಪುತ್ರ ಆರ್.ರಮಾನಂದ್‌ರವರು, ಸೇವಾ ಸಾಧನೆಯಲ್ಲಿ ಆನಂದ ಕಂಡವರು.

ಸ್ವಾತಂತ್ರ್ಯ ಪೂರ್ವದಲ್ಲಿ 1939ರ ಸೆಪ್ಟೆಂಬರ್ ಹತ್ತರಂದು ಜನಿಸಿದ ರಮಾನಂದ ಅವರು, ಶ್ರೀಮಂತ ಕುಟುಂಬದವರಾದರೂ ಬಾಲ್ಯದಲ್ಲಿ ಶಿಸ್ತುಬದ್ಧ ಅಚ್ಚುಕಟ್ಟಿನ ಜೀವನವನ್ನು ತಂದೆ ಹಾಗೂ ದೊಡ್ಡಪ್ಪಂದಿರಿಂದ ರೂಢಿಸಿಕೊಂಡವರು. ಬಾಲ್ಯದ ವಿದ್ಯಾರ್ಥಿ ದೆಸೆಯಲ್ಲಿ ಸ್ಕೌಟ್, ಸೇವಾದಳ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಚಟುವಟಿಕೆಗಳಲ್ಲಿ ಭಾಗಿಯಾಗಿ ಶಿಸ್ತು ಅಳವಡಿಸಿ ಕೊಂಡವರು.

ನಗರದ ಬ್ರಹ್ಮಪ್ಪ ದೇವೇಂದ್ರಪ್ಪ ತವನಪ್ಪ ಅಂದರೆ ಬಿ.ಡಿ.ಟಿ. ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವಿ ಪಡೆದವರು. ಏರೋನಾಟಿಕಲ್ ಇಂಜಿನಿಯರಿಂಗ್ ಮಾಡಿ, ಭಾರತೀಯ ವಾಯು ಸೇನೆಯಲ್ಲಿ ಏರ್ ಕಮಾಂಡರ್ ಆಗಬೇಕೆಂಬ ಕನಸು ಕಂಡವರು ರಮಾನಂದ್. ಆದರೆ, ಕೈಗಾರಿಕೋದ್ಯಮ ಸ್ಥಾಪಿಸುವ ಅನಿವಾರ್ಯತೆ ಬಂದು 1961 ರಿಂದ 63 ಅವಧಿಯಲ್ಲಿ ಹಾಲೆಂಡ್, ಸ್ವಿಡ್ಜರ್‌ಲ್ಯಾಂಡ್ ಮುಂತಾಗಿ ಇಡೀ ಯುರೋಪ್ ಖಂಡ ಹಾಗೂ ಅಮೇರಿಕಾ, ಸ್ಕ್ಯಾಂಡಿನೇವಿಯ ಪ್ರವಾಸ ಮಾಡಿ, ಕೈಗಾರಿಕೋದ್ಯಮದ ಅನುಭವ ಪಡೆದವರು 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂಬಂತೆ ದಾವಣಗೆರೆಯಲ್ಲಿ ಸಹೋದರರೊಂದಿಗೆ ಪಾಲುದಾರಿಕೆಯಲ್ಲಿ ಯಂತ್ರೋಪಕರಣಗಳ ತಯಾರಿಕೆಯ ರಾಜನಹಳ್ಳಿ ಇಂಟರೆಸ್ಟ್ರಿಯಲ್ ಎಂಟರ್ಪ್ರೈಸಸ್, ಸನ್ಮಾಕ್ ಎಂಟರ್ಪ್ರೈಸಸ್, ಪ್ರೀಮಿಯರ್ ಇಂಡಸ್ಟ್ರೀಸ್ ಎಂಬ ಸ್ಟೀಲ್ ಫೌಂಡರಿಯ ನಿರ್ದೇಶಕರಾಗಿ, ರಾಸಾಯನಿಕ ಘಟಕವಾದ ಲಕ್ಷ್ಮಣ್ ಕೆಮಿಕಲ್ಸ್ ನ ನಿರ್ದೇಶಕರಾಗಿ, ಬೆಂಗಳೂರಿನ ಮಫತ್ ಲಾಲ್ ಪ್ಲೇವುಡ್ ಇಂಡಸ್ಟ್ರೀಸ್ ಲಿಮಿಟೆಡ್ ನ ನಿರ್ದೇಶಕ ರಾಗಿ ಕೈಗಾರಿಕಾ ರಂಗದಲ್ಲಿ ಸೇವಾ ಸಾಧನೆ ಮಾಡಿದ ರಮಾನಂದರವರು, ಆರ್.ಲಕ್ಷ್ಮಣ ಶೆಟ್ಟಿ ಅಂಡ್ ಕೋ ಹಾಗೂ ಶಾಮನೂರು ಎಸ್ಟೇಟ್ ಪ್ರೈವೇಟ್ ಲಿಮಿಟೆಡ್ ಮೂಲಕ ವಾಣಿಜ್ಯೋದ್ಯಮ ದಲ್ಲೂ ತೊಡಗಿಸಿ ಕೊಂಡವರು.

ಶೈಕ್ಷಣಿಕ ರಂಗದ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯ ಮಾನ್ಯ ಗೌರವ ಕಾರ್ಯದರ್ಶಿಗಳಾದ ಡಾ. ಶಾಮನೂರು ಶಿವಶಂಕರಪ್ಪ ಅವರ ಮಾರ್ಗದರ್ಶನದಲ್ಲಿ ಬಾಪೂಜಿ ಆಡಳಿತ ಮಂಡಳಿ ನಿರ್ದೇಶಕರಾಗಿ, ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಬಾಲಕರ ವಿದ್ಯಾರ್ಥಿ ನಿಲಯದ ಅಧ್ಯಕ್ಷರಾಗಿ, ಬಾಪೂಜಿ ಫಾರ್ಮಸಿ ಕಾಲೇಜಿನ ಅಧ್ಯಕ್ಷರಾಗಿ, ಜೆ.ಜೆ.ಎಂ ವೈದ್ಯಕೀಯ ಮಹಾವಿದ್ಯಾಲಯದ ದೇಹ ದಾನ ಸಮಿತಿ ಸದಸ್ಯರಾಗಿ, ತಾಂತ್ರಿಕ ಶಿಕ್ಷಣದ ಭಾರತೀಯ ಸಂಘ ಅಂದರೆ ಇಂಡಿಯನ್ ಸೊಸೈಟಿ ಫಾರ್ ಟೆಕ್ನಿಕಲ್ ಎಜುಕೇಷನ್‌ನ ಆಜೀವ ಸದಸ್ಯರಾಗಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್‌ನ ಸದಸ್ಯರಾಗಿ, ಎಸ್. ಆರ್. ಎಲ್.ಎಂ ವಿದ್ಯಾ ಶಾಲಾ ಕಾರ್ಯದರ್ಶಿಗಳಾಗಿ ಪ್ರಸ್ತುತ ಬಾಪೂಜಿ ವಿದ್ಯಾಸಂಸ್ಥೆಯ ಅಧ್ಯಕ್ಷರೂ ಆಗಿ ಶೈಕ್ಷಣಿಕ ಕ್ಷೇತ್ರದಲ್ಲಿ ತೊಡಗಿಸಿಕೊಂಡ ರಮಾನಂದರವರು, ಸಾರ್ವಜನಿಕ ಸೇವಾ ಸಕ್ತಿಯಿಂದಾಗಿ ಇವರು ದಾವಣಗೆರೆ ಆರೋಗ್ಯಧಾಮ ಸ್ಥಾಪಿಸಿ, ಅದರ ಅಧ್ಯಕ್ಷರಾಗಿ, ಬುದ್ಧಿಮಾಂದ್ಯ ಮಕ್ಕಳ ಪುನಶ್ಚೇತನಕ್ಕಾಗಿ ಅಂಗವಿಕಲರ ಆಶಾಕಿರಣ ಟ್ರಸ್ಟಿನ ಉಪಾಧ್ಯಕ್ಷರಾಗಿ, ಭಾರತ ಸೇವಾದಳದ ಉಪಾಧ್ಯಕ್ಷರಾಗಿ, ರಾಜನಹಳ್ಳಿ ಚಾರಿಟಬಲ್ ಟ್ರಸ್ಟ್‌ನ ಉಪಾಧ್ಯಕ್ಷರಾಗಿ, ನಗರದ ಡಿಸಿಎಂ ಟೌನ್ ಶಿಪ್‌ನ ವಾಸವಿ ಸೇವಾ ಸಂಘದ ಅಧ್ಯಕ್ಷರಾಗಿ, ವಾಸವಿ ಕ್ಲಬ್ ಇಂಟರ್‌ನ್ಯಾಷನಲ್ ದಾವಣಗೆರೆ ಶಾಖೆಯ ಅಧ್ಯಕ್ಷರಾಗಿ, ಕೇಂದ್ರ ಅಬಕಾರಿ ಮತ್ತು ಸಣ್ಣ ಕೈಗಾರಿಕಾ ಸಲಹಾ ಮಂಡಳಿಯ ಮಾಜಿ ಅಧ್ಯಕ್ಷರಾಗಿ, ಚಿತ್ರದುರ್ಗ ಜಿಲ್ಲಾ ಸಣ್ಣ ಕೈಗಾರಿಕಾ ಸಂಘದ ಮಾಜಿ ಅಧ್ಯಕ್ಷರಾಗಿ, ರೋಟರಾಕ್ಟಿನ ಮಾಜಿ ಅಧ್ಯಕ್ಷರಾಗಿ, ರೋಟರಿಯ ಮಾಜಿ ನಿರ್ದೇಶಕರಾಗಿ ತಮ್ಮ ಸೇವಾಸಕ್ತಿಯನ್ನು ಸಾರ್ಥಕ ಗೊಳಿಸಿಕೊಂಡವರು. ತೋಟಗಾರಿಕೆ, ಅಪರೂಪದ ನಾಣ್ಯ ಸಂಗ್ರಹ, ಫೋಟೋಗ್ರಫಿ, ಶಾಸ್ತ್ರೀಯ ನೃತ್ಯ, ಸಂಗೀತ, ಲಲಿತ ಕಲೆಗಳಲ್ಲಿ ಆಸಕ್ತಿ ಅಭಿರುಚಿ ಹೊಂದಿದ ಇವರು, ದಶಕಗಳ ಹಿಂದೆ ಅಮೆರಿಕೆಯಲ್ಲಿದ್ದಾಗ ಪಾಶ್ಚಿಮಾತ್ಯ ನೃತ್ಯವನ್ನೂ ಕಲಿತವರಾಗಿದ್ದರು.

ಕ್ರೀಡಾಪಟುವಾಗಿ ಹಾಕಿ, ಬೇಸ್ಬಾಲ್, ಟೆನ್ನಿಸ್, ಕ್ರಿಕೆಟ್ ಕ್ರೀಡಾಕೂಟಗಳಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಕಾಲೇಜನ್ನು ಪ್ರತಿನಿಧಿಸಿದ್ದರು.

ದಾನಿಗಳ ನಗರವೆಂದು ಪ್ರಸಿದ್ಧವಾಗಿರುವ ದಾವಣಗೆರೆಯಲ್ಲಿ ರಾಜನಹಳ್ಳಿ ಮನೆತನದವರ ದಾನ ಕಾರ್ಯಗಳು ಪ್ರಖ್ಯಾತವಾಗಿದ್ದು, ಆರ್.ರಮಾನಂದ ರವರು ಸಹಾ ನಗರದ ಡಿಸಿಎಂ ಟೌನ್‌ಶಿಪ್‌ನ ಕಲ್ಯಾಣ ಮಂಟಪಕ್ಕೆ 50 ಲಕ್ಷ ರೂಪಾಯಿಗಳ ದೇಣಿಗೆ ನೀಡಿದ್ದು, ಅವೋಪಾ ಸಂಸ್ಥೆಗೂ 30 ಲಕ್ಷ ರೂಪಾಯಿಗಳ ದೇಣಿಗೆ ನೀಡಿದವರಾಗಿದ್ದು, ಇದೇ ರೀತಿಯ ದೊಡ್ಡ ಮೊತ್ತದ ದೇಣಿಗೆಯನ್ನು ಈಶ್ವರಮ್ಮ ಟ್ರಸ್ಟ್ ಶಾಲೆಗೂ ಸಹ ನೀಡಿದವರಾಗಿದ್ದಾರೆ. ಸಾಮಾನ್ಯವಾಗಿ ಜನೋಪಯೋಗಿಯಾದ ಉತ್ತಮ ಕಾರ್ಯ ಮತ್ತು ಯೋಜನೆಗಳಿಗೆ ಯಾರೇ ಕೇಳಿ ಬಂದರೂ ಗರಿಷ್ಠ ಒಂದು ಲಕ್ಷ ರೂಪಾಯಿಗೂ ಕಡಿಮೆ ಇಲ್ಲದಂತೆ ದಾನ ಮತ್ತು ದೇಣಿಗೆ ನೀಡುವ ಪರಿಪಾಠವನ್ನು ರಮಾನಂದ ರೂಡಿಸಿಕೊಂಡಿದ್ದರು.

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ಥಾಪನೆಗೆ ಮದ್ದೂರಾಯಪ್ಪ ಲಕ್ಷ್ಮಣ ಶೆಟ್ಟಿ ಟ್ರಸ್ಟ್‌ನಿಂದ ಭೂದಾನ ನೀಡುವಲ್ಲೂ ಇವರ ಹಾಗೂ ಇವರ ಸಹೋದರರ ಪಾತ್ರ ಸ್ಮರಣೀಯವಾಗಿದೆ.

ದೊಡ್ಡಪ್ಪಂದಿರಾದ ರಾಜನಹಳ್ಳಿ ಹನುಮಂತಪ್ಪನವರು, ಮದ್ದೂರಾಯಪ್ಪನವರು, ತಂದೆ ಲಕ್ಷ್ಮಣ ಶೆಟ್ಟರ್ ಅವರ ಮಾರ್ಗದರ್ಶನವನ್ನು ಸದಾಸ್ಮರಿಸುತ್ತಿದ್ದ ರಮಾನಂದರವರು, ತಮ್ಮ ತಾಯಿಯ ಅನಾರೋಗ್ಯದ ಸಂದರ್ಭದಲ್ಲಿ ಸಹೋದರ - ಸಹೋದರಿಯರ ಒಡಗೂಡಿ ತಾಯಿಯ ಶುಶ್ರೂಷೆ ಆರೈಕೆಯಲ್ಲಿ ಧನ್ಯತೆಯನ್ನು ಕಂಡವರು.

ಸುಸಂಸ್ಕೃತಿಯ ಪ್ರೇಮಾರನ್ನು ಅರ್ಧಾಂಗಿ ಯಾಗಿ ವರಿಸಿ, ನಾಲ್ವರು ಸುಪುತ್ರಿಯರನ್ನೂ ಸುಜ್ಞಾನಿಗಳನ್ನಾಗಿ ಬೆಳೆಸಿ, ಸುಸಂಸ್ಕೃತ ಮನೆತನದ ಯೋಗ್ಯರಿಗೆ ಕನ್ಯಾದಾನ ಮಾಡಿದವರು.

ಬಿಐಇಟಿ ಬಾಲಕರ ಹಾಸ್ಟೆಲ್‌ನ ಯಾವುದೇ ಕಾರ್ಯಕ್ರಮದಲ್ಲೂ ಬೇರೆ ರಾಜ್ಯದಿಂದ ಬಂದ ವಿದ್ಯಾರ್ಥಿಗಳಿಗೆ 'ಬೇಗನೇ ಕನ್ನಡ ಕಲಿಯಿರಿ, ಇದು ನಿಮ್ಮ ಮಾತೃಭಾಷಾ ಕಿರೀಟಕ್ಕೆ ಗರಿ ಇಟ್ಟಂತೆ' ಎಂದು ಯಾವಾಗಲೂ ಹೇಳುತ್ತಿದ್ದ ರಮಾನಂದ್, ಕನ್ನಡಾಭಿಮಾನಿಗಳು ಅಷ್ಟೇ ಸಂಸ್ಕೃತದ ಬಗೆಗೂ ಅಪಾರ ಗೌರವಾದರ ಇಟ್ಟುಕೊಂಡವರಾಗಿದ್ದರು. ವಯೋಮಾನ ವೃದ್ಧಿಸುತ್ತಾ ಬಂದಂತೆ ಅಧ್ಯಾತ್ಮ, ಧ್ಯಾನ ಹಾಗೂ ಯೋಗ ಅನುಷ್ಠಾನದಲ್ಲಿ ಹೆಚ್ಚು ಸಂತೃಪ್ತಿಯನ್ನು ಕಂಡವರು.

**- ಹೆಚ್.ಬಿ.ಮಂಜುನಾಥ,**
ಹಿರಿಯ ಪತ್ರಕರ್ತರು

## ನಗರದಲ್ಲಿ ಇಂದು 'ಕಿವುಡ ಮಾಡಿದ ಕಿತಾಪತಿ' ಸಾಮಾಜಿಕ ನಾಟಕ ಪ್ರದರ್ಶನ

ಶಿವಕುಮಾರಸ್ವಾಮಿ ಬಡಾವಣೆ, 2ನೇ ಹಂತ, ಶ್ರೀ ಸಂಜೀವಿನಿ ಆಂಜನೇಯಸ್ವಾಮಿ ಬಯಲು ಮಂದಿರದಲ್ಲಿ ಇಂದು ಶನಿವಾರ ರಾತ್ರಿ 8.30 ಕ್ಕೆ ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘ, ದಾವಣಗೆರೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರ ಆಶ್ರಯದಲ್ಲಿ ಪಿ. ಖಾದರ್ ಮತ್ತು ಸಂಗಡಿಗರು ದಾವಣಗೆರೆ ಇವರಿಂದ 'ಕಿವುಡ ಮಾಡಿದ ಕಿತಾಪತಿ' ಸಾಮಾಜಿಕ ನಾಟಕ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಮುಂಡಗೋಡು ತಾಲ್ಲೂಕಿನ ಬಸವಧಾಮ ಅತ್ತಿವೇರಿ ಶ್ರೀ ಬಸವೇಶ್ವರಿ ಮಾತಾಜಿ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ರವಿಚಂದ್ರ, ಹಿರಿಯ ನಾಗರಿಕರಾದ ಟಿ. ಹನುಮಂತಪ್ಪ, ಬಿ. ತಿಮ್ಮಣ್ಣನವರು, ಜಿ. ಪರಮೇಶ್ವರಪ್ಪನವರು, ರವೀಂದ್ರಸ್ವಾಮಿ, ಮಂಡ್ಲೂರು ಬಸವರಾಜಪ್ಪ.

ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್. ರಾಜು, ಕಾರ್ಯದರ್ಶಿ ಎ. ಸೂರೇಗೌಡ ಹಾಗೂ ಸದಸ್ಯರುಗಳು ಕೋರಿದ್ದಾರೆ.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
**ದಾವಣಗೆರೆ ವಿಭಾಗ, ದಾವಣಗೆರೆ**

ಸಂಖ್ಯೆ.ಕರಾಸಾ/ದಾವಿ/ವಿನಿ/356/2024–25 ದಿನಾಂಕ:27.11.2024

**ಇ–ಟೆಂಡರ್ ಪ್ರಕಟಣೆ ಸಂಖ್ಯೆ : 01/2024–25**

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿರುವ ಕ.ರಾ.ರ.ಸಾ. ನಿಗಮದ ತಾತ್ಕಾಲಿಕ ಬಸ್ ನಿಲ್ದಾಣವನ್ನು ಒಡೆದು ಹಾಕಿ ಅದರಲ್ಲಿ ಬಂದಂತಹ ಉಪಯೋಗವಾಗುವ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ಹರಾಜು ಕಮ್ ಟೆಂಡರ್ ಮಾದರಿಯಲ್ಲಿ (Auction cum Tender) ವಿಲೇವಾರಿ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಅಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ https://ksrtc.karnataka.gov.in ನಲ್ಲಿ ದಿನಾಂಕ: 28.11.2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕಾಮಗಾರಿ ಉಪ ವಿಭಾಗ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ : ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು–7760990457.

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾಸಾಸಂಇ/ವಾಪ್ರ/ಜಿಎ/3509/2024–25

# ನಗರದಲ್ಲಿ ಇಂದು-ನಾಳೆ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ





ಜಿಲ್ಲಾ ಕ್ರೀಡಾಂಗಣದಲ್ಲಿ ದಿ॥ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸ್ಮರಣಾರ್ಥ ಇಂದು ಶನಿವಾರ ಸಂಜೆ 7ಕ್ಕೆ ಭಾರತ ಇಲೆವೆನ್ (ಕರ್ನಾಟಕ ತಂಡ) ಹಾಗೂ ಶ್ರೀಲಂಕಾ ಇಲೆವೆನ್ ತಂಡಗಳ ಮಧ್ಯೆ ಕ್ರಿಕೆಟ್ ಪಂದ್ಯ ನಡೆಯಲಿದೆ. ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಶನಿವಾರ ನಡೆಯುವ ಕ್ರಿಕೆಟ್ ಪಂದ್ಯಾವಳಿಯಲ್ಲಿ ಚನ್ನೈ (ತಮಿಳುನಾಡು) ಡ್ರಿಮ್ ಇಲವೆನ್ಸ್, ಶ್ರೀಲಂಕಾ (ದಕ್ಷಿಣ ಶ್ರೀಲಂಕಾ), ಕೊಡಗು, ಬೆಂಗಳೂರು - 15 ತಂಡ ಗಳು, ಹಾಸನ, ಉಡುಪಿ, ಮಂಗಳೂರು, ತುರುವೇಕೆರೆ, ಹಿರಿಯೂರು, ಪಾಂಡವ ಪುರ, ಸಕಲೇಶಪುರ, ಮಂಗಳೂರು, ಕೋಟಾ, ನಂಜನಗೂಡು, ರಂಗನಕೆರೆ, ಚಿತ್ರದುರ್ಗ, ಶಿವಮೊಗ್ಗ, ದಾವಣಗೆರೆ-15 ತಂಡಗಳು ಸೆಣಸಾಟ ನಡೆಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್‌ಎಸ್ ಮಲ್ಲಿಕಾರ್ಜುನ್ ಇದೇ ಮೊದಲ ಬಾರಿಗೆ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿರುವ ಅಂತಾ ರಾಷ್ಟ್ರೀಯ ಕ್ರಿಕೆಟ್ ಪಂದ್ಯಕ್ಕೆ ಚಾಲನೆ ನೀಡಿ, ಇಂದು ಮತ್ತು ನಾಳಿನ ಪಂದ್ಯಾವಳಿಗಳನ್ನು ವೀಕ್ಷಿಸಲಿದ್ದಾರೆ.

ಕ್ರಿಕೆಟ್ ಪಂದ್ಯವು ನಾಳೆ ಭಾನುವಾರ ಮಧ್ಯರಾತ್ರಿ ಮುಗಿಯಲಿದೆ ಎಂದು ಕ್ರಿಕೆಟ್ ಸಂಘಟಕರಾದ ಜಯಪ್ರಕಾಶ್ ಗೌಡ (ಕುಬೇರ), ಕುರುಡಿ ಗಿರೀಶ್ ಸ್ವಾಮಿ ತಿಳಿಸಿದ್ದಾರೆ.

# ನಗರದಲ್ಲಿ ಇಂದು 'ಶಿವದೂತ ಗುಳಿಗ' ವಿಭಿನ್ನ ಶೈಲಿಯ ನಾಟಕ ಪ್ರದರ್ಶನ

ಸವಿಡ್ಯೆನ್ ಮಹೇಶ್ ಶೆಟ್ಟಿ ಗೆಳೆಯರ ಬಳಗ ಹಾಗೂ ರಿದ್ಧಿ - ಸಿದ್ಧಿ ಫೌಂಡೇಶನ್ ಸಹಯೋಗದೊಂದಿಗೆ ಆಯೋಜಿಸಿರುವ ವಿಜಯಕುಮಾರ್ ಕೋಡಿಯಲ್ ಬೈಲ್ ನಿರ್ದೇಶನದ ಕಾಂತಾರ ಕನ್ನಡ ಚಲನಚಿತ್ರ ಖ್ಯಾತಿಯ ಕಲಾಸಂಗಮದ ಕಲಾವಿದರಾದ ಸ್ವರಾಜ್ ಶೆಟ್ಟಿ ಅಭಿನಯಿಸಿರುವ 'ಶಿವದೂತ ಗುಳಿಗ' ಎಂಬ ವಿಭಿನ್ನ ಶೈಲಿಯ ಕನ್ನಡ ನಾಟಕ ಪ್ರದರ್ಶನವು ಇಂದು ಸಂಜೆ 6.30 ಕ್ಕೆ ಎಂ.ಬಿ.ಎ. ಕಾಲೇಜು ಮೈದಾನದಲ್ಲಿ ನಡೆಯಲಿದೆ.

ಈ ನಾಟಕದ ಪ್ರದರ್ಶನವನ್ನು ತಲೆಸೀಮೆ ಎನ್ನುವ ಕಾಯಿಲೆಗೆ ತುತ್ತಾಗಿರುವ ಪುಷ್ಪ ಮತ್ತು ವಿಸ್ಮಯ ಎಂಬ ಎರಡು ಮಕ್ಕಳ ಚಿಕಿತ್ಸೆಯ ಸಹಾಯಾರ್ಥವಾಗಿ ನಡೆಯಲಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ನೆರವೇರಿಸಲಿದ್ದಾರೆ.

ಮುಖ್ಯ ಅತಿಥಿಯಾಗಿ ಸಚಿವ ಎಸ್. ಎಸ್. ಮಲ್ಲಿಕಾರ್ಜುನ, ದುಡಾ ಅಧ್ಯಕ್ಷ ದಿನೇಶ್. ಕೆ. ಶೆಟ್ಟಿ, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀಮತಿ ಉಮಾ ಪ್ರಶಾಂತ, ಮಾಜಿ ಮೇಯರ್ ಎಸ್.ಟಿ. ವೀರೇಶ್, ರಾಜ್ಯ ಬಿಜೆಪಿ ಎಸ್.ಟಿ. ಮೋರ್ಚಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ, ರಿದ್ಧಿ - ಸಿದ್ಧಿ ಫೌಂಡೇಶನ್ ಅಧ್ಯಕ್ಷ ರಾಜು ಭಂಡಾರಿ ಅವರು ಭಾಗವಹಿಸಲಿದ್ದಾರೆ.

ಮಲ್ಲಾಡಿ ಪ್ರಭಾಕರ್ ಶೆಟ್ಟಿ ಅವರು ಅಧ್ಯಕ್ಷತೆ ವಹಿಸಲಿದ್ದಾರೆಂದು ಆಯೋಜಕರಾದ ಸವಿಡ್ಯೆನ್ ಮಹೇಶ ಶೆಟ್ಟಿ, ಅನಿಲ್ ಗೌಡ, ಅಂಕಿತ ಮೊಯಿಲಿ, ಗಣೇಶಕಿರಣ ಮತ್ತು ಶ್ರೀಕಾಂತ್ ಬಗರೆ ತಿಳಿಸಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 99459 77433.

# ಕೋಡಿ ಕ್ಯಾಂಪ್ ಕೊಟ್ಟೂರೇಶ್ವರ ಸ್ವಾಮಿ ಮಠದಲ್ಲಿ ನಾಳೆ ಛಟ್ಟಿ ಅಮವಾಸ್ಯೆ



ದಾವಣಗೆರೆಯ ಕೊಟ್ಟೂರು ಶ್ರೀ ಗುರುಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ಇವರಿಂದ ಮಾಗಾನಹಳ್ಳಿ ಕೋಡಿ ಕ್ಯಾಂಪ್ ಬಳಿ ಇರುವ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿ ಪಾದಗಳಿಗೆ ಛಟ್ಟಿ ಅಮಾವಾಸ್ಯೆ ಪ್ರಯುಕ್ತ ಡಿಸೆಂಬರ್ 1 ರ ಭಾನುವಾರ ಬೆಳಿಗ್ಗೆ 6.30ಕ್ಕೆ ಅಭಿಷೇಕ - ಪೂಜೆ ನಡೆಯಲಿದೆ. ನಂತರ ಬೆಳಿಗ್ಗೆ 8 ರಿಂದ ಪ್ರಸಾದ ದಾಸೋಹ ಏರ್ಪಡಿಸಲಾಗಿದೆ.

ಭಕ್ತರು ಪ್ರಸಾದದ ಸೇವಾಕರ್ತರಾಗಿದ್ದಾರೆ. ವಿವರಕ್ಕೆ ಕಣಕುಪ್ಪಿ ಮುರುಗೇಶಪ್ಪ (96118 89151), ಟಿ.ಜಿ. ಬಕ್ಕೇಶಪ್ಪ (91089 88898), ಬಿ. ಚಿದಾನಂದಪ್ಪ (98455 28449), ಮಲ್ಲಾಬಾದಿ ಗುರುಬಸವರಾಜ್ (79757 97079) ತಿಳಿಸಿದ್ದಾರೆ. ದಾಸೋಹ ಮನೆ ಮತ್ತು ಸಭಾಂಗಣ ಕಟ್ಟಡವು ಪ್ರಗತಿ ಹಂತದಲ್ಲಿದೆ. ಭಕ್ತಾದಿಗಳು ದೇಣಿಗೆ ಸಲ್ಲಿಸಬಹುದು.

# 'ಹಸಿರು ದಾವಣಗೆರೆ' ಗೆ ಪ್ರಮಾಣಿಕ ಪ್ರಯತ್ನ

**ನಗರ ಪಾಲಿಕೆಯ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್**

ದಾವಣಗೆರೆ, ನ.29- ನಗರವನ್ನು ಕಾಂಕ್ರೀಟ್ ರಸ್ತೆಗಳನ್ನಾಗಿ ಮಾಡುವ ಮೂಲಕ ಧೂಳು ಮುಕ್ತ ನಗರ ಮಾಡಲಾಗಿದ್ದು, ಉದ್ಯಾನವನಗಳ ಅಭಿವೃದ್ಧಿಯನ್ನು ಈಗಾಗಲೇ ಮಾಡಲಾಗಿದ್ದು, 'ಹಸಿರು ದಾವಣಗೆರೆ' ಮಾಡುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಅತ್ಯಗತ್ಯ ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಹೇಳಿದರು.

ಇಲ್ಲಿನ ಪಾಲಿಕೆ ಆವರಣದಲ್ಲಿನ ರಂಗಮಂದಿರದಲ್ಲಿ ಮಹಾನಗರ ಪಾಲಿಕೆ, ಕನ್ನಡ ಪರ ಸಂಘ-ಸಂಸ್ಥೆಗಳು ಹಾಗೂ ಪತ್ರಕರ್ತರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದ ಎರಡನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮಹಾನಗರ ಪಾಲಿಕೆಯಲ್ಲಿ ನಾಲ್ವರು ಮಹಿಳೆಯರು ಸ್ಥಾಯಿ ಸಮಿತಿ ಅಧ್ಯಕ್ಷರಾಗಿದ್ದು, ಮಹಿಳಾ ಪಡೆಯೇ ತಯಾರಾಗಿದೆ. ಪ್ರತಿಯೊಬ್ಬರೂ ಸಹಕರಿಸುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸೋಣ ಎಂದರು.

ರಾಜ್ಯದ 10 ಮಹಾನಗರ ಪಾಲಿಕೆಗಳ ಪೈಕಿ ದಾವಣಗೆರೆ ಮಹಾನಗರ ಪಾಲಿಕೆಗೆ ಮಾತ್ರ 50 ಲಕ್ಷ ರೂ. ವೆಚ್ಚದಲ್ಲಿ ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆಗೆ ಹಣ ಬಿಡುಗಡೆ ಮಾಡಿದೆ. ಇಡೀ ರಾಜ್ಯದಲ್ಲೇ ಪ್ರಥಮ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದು ಹೇಳಿದರು.

ರಾಜ್ಯದ ಎಲ್ಲಾ ಅಂಗಡಿ, ಮುಂಗಟ್ಟುಗಳ ನಾಮಫಲಕಗಳು ಕಡ್ಡಾಯವಾಗಿ ಶೇ. 60 ರಷ್ಟು ಕನ್ನಡದಲ್ಲಿಯೇ ಇರಬೇಕೆಂಬ ಸೂಚನೆಯನ್ನು ಹೊರಡಿಸಿದ್ದು, ಅದರಂತೆ ಎಲ್ಲಾ ಜಿಲ್ಲೆಗಳಲ್ಲೂ ಕ್ರಮ ಜರುಗಿಸಲಾಗಿದೆ ಎಂದರು.

ಕನ್ನಡ ಭಾಷೆಯ ಅಭಿಮಾನ, ಪ್ರೀತಿ, ಕಾಳಜಿಯನ್ನು ಮೂಡಿಸುವ ನಿಟ್ಟಿನಲ್ಲಿ ಕನ್ನಡ ನಾಡು-ನುಡಿ, ನೆಲ-ಜಲ ಸಂರಕ್ಷಣೆಗೆ ಮುಂದಾಗುವ ಮೂಲಕ ಮುಂದಿನ ಪೀಳಿಗೆಗೆ ಉಡುಗೊರೆಯಾಗಿ ನೀಡೋಣ ಎಂದು ಹೇಳಿದರು.

ನಾಡಿನ ಹಿರಿಯ ಕವಿ ಬಿ.ಆರ್. ಲಕ್ಷ್ಮಣರಾವ್ ಮಾತನಾಡಿ, ಕರುನಾಡನ್ನು 'ಸರ್ವಜನಾಂಗದ ಶಾಂತಿಯ ತೋಟ'ವನ್ನಾಗಿ ಮಾಡುವತ್ತ ಎಲ್ಲರೂ ಚಿತ್ತ ಹರಿಸಬೇಕು. ಎಲ್ಲಾ ಕವಿಗಳ ಆಶಯ ಕೂಡ ಎಂದು ಹೇಳಿದರು.

ಮೇಯರ್ ಚಮನ್ ಸಾಬ್ ಹೇಳುವಂತೆ ಕನ್ನಡ ರಾಜ್ಯೋತ್ಸವ, ರಸಮಂಜರಿ, ಜನಪದ ವೈಭವದಂತಹ ಕಾರ್ಯಕ್ರಮಗಳು ಕೇವಲ ಮನರಂಜನೆ ನೀಡುವುದಷ್ಟೇ ಅಲ್ಲದೇ ಸೌಹಾರ್ದತೆ ಬೆಸೆಯುವ ನಿಟ್ಟಿನಲ್ಲಿ ಆಗಲಿ ಎಂದರು.

ಕವಿ ಬರೆದ ಕವಿತೆಗಳು ಜನಪದೀಯ ಗೀತೆಗಳಾಗಿ ಜನರನ್ನು ನೇರವಾಗಿ ತಲುಪಿದರೆ, ಕವಿ ಧನ್ಯನಾಗುತ್ತಾನೆ ಎಂದು ಹೇಳಿದರು.

ಶಾಯಿರಿ ಕವಿ ಅಸಾದುಲ್ಲಾ ಬೇಗ್ ತಮ್ಮ ಶಾಯಿರಿಗಳ ಮೂಲಕ ಸಹೃದಯ ಪ್ರೇಕ್ಷಕರನ್ನು ರಂಜಿಸಿದರು. ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ 120 ಸಾಧಕರನ್ನು ಸನ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಜಿ.ಎನ್. ಗಂಗಾಧರ ಸ್ವಾಮಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್. ಬಡದಾಳ್ ಮಾತನಾಡಿದರು.

ಟಿವಿ9 ವರದಿಗಾರ ಬಸವರಾಜ್ ದೊಡ್ಮನಿ, ಆಯುಕ್ತ ರಾದ ರೇಣುಕಾ, ಉಪ ಆಯುಕ್ತೆ ಲಕ್ಷ್ಮೀ, ಮೇಯರ್ ಕೆ. ಚಮನ್ ಸಾಬ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಉಪ ಮೇಯರ್ ಸೋಗಿ ಶಾಂತಕುಮಾರ್, ಸ್ಥಾಯಿ ಸಮಿತಿ ಅಧ್ಯಕ್ಷರಾದ ಸವಿತಾ ಗಣೇಶ್ ಹುಲ್ಮನಿ, ಆಶಾ ಉಮಾ ಶಂಕರ್, ಸುಧಾ ಮಂಜುನಾಥ್ ಇಟ್ಟಿಗುಡಿ, ಉರ್‌ಬಾನು, ಸದಸ್ಯರಾದ ಕೆ. ಪ್ರಸನ್ನಕುಮಾರ್, ಎಸ್.ಟಿ. ವೀರೇಶ್, ಎ. ನಾಗರಾಜ್, ಮೀನಾಕ್ಷಿ ಜಗದೀಶ್, ಎಲ್.ಎಂ.ಹೆಚ್. ಸಾಗರ್, ಕನ್ನಡ ಪರ ಹೋರಾಟಗಾರ ಕೆ.ಜಿ. ಶಿವಕುಮಾರ್, ನೌಕರರ ಸಂಘದ ಬಸವರಾಜಯ್ಯ, ಗೋವಿಂದರಾಜ್, ಕರವೇ ಅಧ್ಯಕ್ಷರಾದ ಎಂ.ಎಸ್. ರಾಮೇಗೌಡ, ಜಮ್ನಳ್ಳಿ ನಾಗರಾಜ್, ಶಾಂತಮ್ಮ, ರಾಧಾಬಾಯಿ,

ಬಾಲು ಮತ್ತು ತಂಡದ ಕಲಾವಿದರ 'ಜಂಭೆ ಝಲಕ್' ಕಾರ್ಯಕ್ರಮ ಮೇಯರ್ ಕೆ. ಚಮನ್ ಸಾಬ್ ಅವರನ್ನು ಮೊದಲ್ಗೊಂಡು ವೇದಿಕೆ ಮೇಲಿನ ಗಣ್ಯರು, ನೆರೆದ ಸರ್ವರನ್ನು ಹುಚ್ಚೆದ್ದು ಕುಣಿಯುವಂತೆ ಮಾಡಿತು. ಇದಕ್ಕೂ ಮುನ್ನ ನಡೆಸಿಕೊಟ್ಟ ಜನಪದ ಸಂಗೀತ ಕಾರ್ಯಕ್ರಮ ಕಣ್ಮನ ಸೆಳೆಯಿತು.

ವೇದಿಕೆ ಕಾರ್ಯಕ್ರಮದ ನಂತರ ಖ್ಯಾತ ಗಾಯಕಿ ಸಂಗೀತಾ ಕಟ್ಟಿ ಅವರ ಕರ್ನಾಟಕ ಗೀತ ವೈಭವ ಹಾಗೂ ಜೂನಿಯರ್ ವಿಷ್ಣುವರ್ಧನ ಅವರ ಮಿಮಿಕ್ರಿ ಕಾರ್ಯಕ್ರಮ ಜರುಗಿತು.






# ನಗರದಲ್ಲಿಂದು ಪಾಲಿಕೆಯಿಂದ ಅಮೃತ ಪುರುಷರಿಗೆ ಪೌರ ಸನ್ಮಾನ

ದಾವಣಗೆರೆ ಮಹಾನಗರ ಪಾಲಿಕೆ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವು ನಡೆಯುತ್ತಿದ್ದು, ನಾಲ್ಕನೇ ದಿನವಾದ ಇಂದು ಸಂಜೆ 5.30ಕ್ಕೆ ನಗರ ಪಾಲಿಕೆ ಆವರಣದ ಶ್ರೀಮತಿ ರಾಧಮ್ಮ ಚನ್ನಗಿರಿ ರಂಗಪ್ಪ ಸ್ಮಾರಕ ರಂಗ ಮಂದಿರದ ಭವ್ಯ ದಿವ್ಯ ವೇದಿಕೆಯಲ್ಲಿ ಐವರು ಅಮೃತ ಪುರುಷರಿಗೆ ಪೌರ ಸನ್ಮಾನ ನೀಡಿ ಗೌರವಿಸಲಾಗುವುದು ಎಂದು ಮಹಾಪೌರರಾದ ಕೆ. ಚಮನ್ ಸಾಬ್ ತಿಳಿಸಿದ್ದಾರೆ.

ಹಿರಿಯ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಹಿರಿಯ ವರ್ತಕರಾದ ಚನ್ನಗಿರಿ ವಿರೂಪಾಕ್ಷಪ್ಪ, ಮಾಜಿ ಸಚಿವ ಎಸ್.ಎ. ರವೀಂದ್ರನಾಥ್, ಹಿರಿಯ ವೈದ್ಯ ಡಾ. ಎಸ್.ಎಂ. ಎಲಿ, ಹಿರಿಯ ರೈತ ಹೋರಾಟಗಾರ ಸಿ. ನರಸಿಂಹಪ್ಪ ಮತ್ತು ಶಿಕ್ಷಣ ತಜ್ಞ ಕೆ. ಇಮಾಂ ಅವರುಗಳಿಗೆ ಪೌರ ಸನ್ಮಾನ ನೀಡಲಾಗುತ್ತದೆ.

ಮೇಯರ್ ಕೆ. ಚಮನ್ ಸಾಬ್ ಅವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಡಾ. ರಂಜಾನ್ ದರ್ಗಾ ವಿಶೇಷ ಉಪನ್ಯಾಸ ನೀಡುವರು.

# ಹರಿಹರದಲ್ಲಿ ಇಂದು ರಾಜ್ಯೋತ್ಸವ

ಹರಿಹರ, ನ. 29 - ನಗರದ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ದ ವತಿಯಿಂದ ನಾಳೆ ದಿನಾಂಕ 30 ರ ಶನಿವಾರ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ಆಟೋ ಮೆರವಣಿಗೆ, ಸಾಧಕರಿಗೆ ಸನ್ಮಾನ, ಅನ್ನ ಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ತಾಲ್ಲೂಕು ಕರ್ನಾಟಕ ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ರಮೇಶ್ ಮಾನೆ ಮತ್ತು ನಗರ ಘಟಕದ ಅಧ್ಯಕ್ಷ ಪ್ರೀತಮ್ ಬಾಬು ತಿಳಿಸಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದ ಅಂಗವಾಗಿ ಬೆಳಗ್ಗೆ 10 ಗಂಟೆಗೆ ಶಿವಮೊಗ್ಗ ವೃತ್ತದ ಪಕ್ಕೀರಸ್ವಾಮಿ ಮಠದ ಮುಂಭಾಗದಿಂದ ಬೃಹತ್ ಆಟೋ ಮೆರವಣಿಗೆ ಮೂಲಕ ಭುವನೇಶ್ವರಿ ಭಾವ ಚಿತ್ರದ ಮೆರವಣಿಗೆ ಮಾಡಲಾಗುತ್ತದೆ. ನಂತರ 11 ಗಂಟೆಗೆ ರಾಣಿ ಚೆನ್ನಮ್ಮ ವೃತ್ತದಲ್ಲಿ ವೇದಿಕೆ ಸಮಾರಂಭ ನಡೆಯಲಿದೆ.

ಉದ್ಘಾಟನೆಯನ್ನು ಶಾಸಕ ಬಿ.ಪಿ. ಹರೀಶ್ ಮಾಡಲಿದ್ದಾರೆ. ಆಶಯ ನುಡಿಯನ್ನು ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಮಾತನಾಡಲಿದ್ದು, ಅಧ್ಯಕ್ಷತೆಯನ್ನು ರಕ್ಷಣಾ ವೇದಿಕೆಯ ತಾಲ್ಲೂಕು ಅಧ್ಯಕ್ಷ ರಮೇಶ್ ಮಾನೆ ವಹಿಸಲಿದ್ದಾರೆ. ಸಾಧಕರಿಗೆ ಸನ್ಮಾನ ಮಾಜಿ ಶಾಸಕ ಎಸ್. ರಾಮಪ್ಪ ಹಾಗೂ ಪ್ರಾಸ್ತಾವಿಕ ನುಡಿಯನ್ನು ರಕ್ಷಣಾ ವೇದಿಕೆಯ ನಗರ ಘಟಕದ ಅಧ್ಯಕ್ಷ ಪ್ರೀತಮ್ ಬಾಬು ಮಾತನಾಡಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಕಾಂಗ್ರೆಸ್ ಪಕ್ಷದ ಮುಖಂಡ ನಂದಿಗಾವಿ ಶ್ರೀನಿವಾಸ್, ತಪೋವನ ಛೇರ್ಮನ್ ಶಶಿಕುಮಾರ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ರಕ್ಷಣಾ ವೇದಿಕೆಯ ಜಿಲ್ಲಾ ಅಧ್ಯಕ್ಷ ನಾಗರಾಜ್ ಜಮ್ನಳ್ಳಿ, ನಗರಸಭೆ ಅಧ್ಯಕ್ಷೆ ಕವಿತಾ ಮಾರುತಿ, ಉಪಾಧ್ಯಕ್ಷ ಗುತ್ತೂರು ಜಂಬಣ್ಣ, ತಹಶೀಲ್ದಾರ್ ಗುರುಬಸವರಾಜ್, ಇನ್‌ಸೈಟ್ ಸಂಸ್ಥಾಪಕ ಜಿ.ಬಿ. ವಿನಯ್ ಕುಮಾರ್, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಾಂಭವಿ ನಾಗರಾಜ್ ಭಾಗವಹಿಸಲಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ಗೌರವ ಅಧ್ಯಕ್ಷ ಎನ್.ಎಂ. ಸಿದ್ದಪ್ಪ, ಉಪಾಧ್ಯಕ್ಷ ಅಕ್ಬರ್, ಪ್ರಧಾನ ಕಾರ್ಯದರ್ಶಿ ರುದ್ರೇಶ್ ಇತರರು ಹಾಜರಿದ್ದರು.

# ನಗರದಲ್ಲಿ ಇಂದು ಜಾಗೃತಿ ಕಾರ್ಯಾಗಾರ

ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 9.30ಕ್ಕೆ ಕಾಲೇಜಿನ ಆರ್ ಮತ್ತು ಡಿ ಬ್ಲಾಕ್‌ನಲ್ಲಿ 'ಕೆಲಸದ ಸ್ಥಳದಲ್ಲಿ ಮಹಿಳೆಯರ ಲೈಂಗಿಕ ಕಿರುಕುಳ ತಡೆಗಟ್ಟುವಿಕೆ, ನಿಷೇಧ ಮತ್ತು ಪರಿಹಾರ' ವಿಷಯ ಕುರಿತು ಒಂದು ದಿನದ ಜಾಗೃತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಾಗಾರದಲ್ಲಿ ವಕೀಲರಾದ ಎಂ.ಎನ್. ಮಧುರಾ, ಜೆಜೆಎಂ ಕಾಲೇಜಿನ ಪ್ರೊ. ಡಾ. ಶೋಭಾ ಧನಂಜಯ, ಪಿ. ಶಶಿಕಲಾ ಪಾಲ್ಗೊಳ್ಳಲಿದ್ದು, ಬಿಡಿಟಿ ವಿಶ್ವವಿದ್ಯಾಲಯದ ಡಾ.ಡಿ.ಪಿ.ನಾಗರಾಜಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.

# ನಗರದಲ್ಲಿ ಇಂದು ಕನ್ನಡ ರಾಜ್ಯೋತ್ಸವ

ಎಸ್.ನಿಜಲಿಂಗಪ್ಪ ಬಡಾವಣೆ ಕ್ಷೇಮಾಭಿವೃದ್ಧಿ ಸಮಿತಿಯಿಂದ 69ನೇ ಕನ್ನಡ ರಾಜ್ಯೋತ್ಸವವನ್ನು ಸರ್ಕಾರಿ ನೌಕರರ ಭವನದಲ್ಲಿ ಇಂದು ಸಂಜೆ 5.30ಕ್ಕೆ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಮೇಶ್ ಕೆ.ಎಸ್. ವಹಿಸಲಿದ್ದು, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಜಿ.ಎಂ. ಕಾರ್ಯಕ್ರಮವನ್ನು ಉದ್ಘಾಟಿಸುವರು.

ಪ್ರಸ್ತಾವಿಕ ಶ್ರೀನಿವಾಸ್ ದಾಸಕರಿಯಪ್ಪ, ನೂತನ ಪದಾಧಿಕಾರಿಗಳ ಪದಗ್ರಹಣ ನಡೆಯಲಿದೆ. ಹೆಚ್.ಬಿ. ಮಂಜುನಾಥ್ ಅವರಿಂದ ಕನ್ನಡ ರಾಜ್ಯೋತ್ಸವ ಕುರಿತು ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಕೀಲುಳೆ ತಜ್ಞ ರಮೇಶ್ ಪೂಜಾರ್, ಸ್ತ್ರೀರೋಗ ತಜ್ಞ ಎಂ.ಎಸ್ ಹಿರೇಮಠ್ ಆಗಮಿಸುವರು. ಉಪಾಧ್ಯಕ್ಷರಾದ ಸುನೀಲ್ ಕುಮಾರ್ ಡಿ, ಆರ್.ಕೆ. ರುದ್ರಪ್ಪ, ಪ್ರದಾನ ಕಾರ್ಯದರ್ಶಿ ಸಿದ್ದಣ್ಣ ಡಿ.ಎಸ್., ಖಜಾಂಚಿ ರತ್ನಾಕರ್ ಆರ್.ವಿ. ಕಾರ್ಯದರ್ಶಿ ಸಾಗರ್ ಡಿ.ಎಸ್. ನಿರ್ದೇಶಕರುಗಳಾದ ಶ್ರೀನಿವಾಸ್ ದಾಸಕರಿಯಪ್ಪ, ಎ.ಜಿ.ವೀರೇಶ್, ತೀರ್ಥ ರಾಜ್ ಹೆಚ್.ಸಿ., ಕೆ.ಹೆಚ್. ಶೀಕರ, ಡಿ.ವಿ. ಜಯರುದ್ರಪ್ಪ, ಮೆಹಬೂಬ್ ಬಾಷಾ, ನಾರಾಯಣಸ್ವಾಮಿ ಎಂ.ಜಿ. ಉಪಸ್ಥಿತರಿರುವರು. ಕನ್ನಡಕ್ಕಾಗಿ ಹೋರಾಡಿದವರಿಗೆ ಸನ್ಮಾನ ಹಾಗೂ ಭಾರತೀ ವಾದ್ಯ ವೃಂದದವರಿಂದ ಮನೋರಂಜನೆ, ಬಡಾವಣೆ ಶಾಲಾ ಮಕ್ಕಳಿಂದ ನೃತ್ಯ ನಡೆಯಲಿದೆ.

# ರಮಾನಂದ್ ನಿಧನಕ್ಕೆ ಕರಿಬಸಮ್ಮ ಶೋಕ

ದಾವಣಗೆರೆ, ನ.29- ಬಾಪೂಜಿ ವಿದ್ಯಾಸಂಸ್ಥೆ ಅಧ್ಯಕ್ಷರೂ ಆಗಿರುವ ದಾನಿ ಆರ್.ಎಲ್.ರಮಾನಂದ್ ಅವರ ನಿಧನಕ್ಕೆ ದಯಾಮರಣ ಹೋರಾಟಗಾರ್ತಿ - ನಿವೃತ್ತ ಶಿಕ್ಷಕಿ ಶ್ರೀಮತಿ ಹೆಚ್.ಡಿ. ಕರಿಬಸಮ್ಮ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

# ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ



ದಾವಣಗೆರೆ, ನ. 29- ನಗರದ ಡಿ. ದೇವರಾಜ ಅರಸು ಬಡಾವಣೆಯಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಡಿಸೆಂಬರ್ 1ರ ಕಾರ್ತಿಕ ಅಮಾವಾಸ್ಯೆ (ಛಟ್ಟಿ ಅಮವಾಸ್ಯೆ) ಪೂಜಾ ಕಾರ್ಯಕ್ರಮಗಳು ನಡೆಯಲಿವೆ.

ಬೆಳಿಗ್ಗೆ ಶ್ರೀ ನಾಗಲಿಂಗೇಶ್ವರ ಸ್ವಾಮಿಗೆ ರುದ್ರಾಭಿಷೇಕ, ಮೃತ್ಯುಂಜಯ ಹೋಮ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ, ಪ್ರಸಾದ ವಿನಿಯೋಗ ನಡೆಯುವುದು. ಅದೇ ದಿನ ಸಂಜೆ 6.30ಕ್ಕೆ ಕಾರ್ತಿಕ ಮಾಸದ ಪ್ರಯುಕ್ತ ದೀಪೋತ್ಸವ ಏರ್ಪಾಡಾಗಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ಆದಿಲಕ್ಷ್ಮಿ, ವಿವಿವಿ ಸತ್ಯನಾರಾಯಣ ಮತ್ತು ಶ್ರೀಮತಿ ಶ್ರೀದೇವಿ ಶ್ರೀನಿವಾಸ ರಾಜು ಹಾಗೂ ಸಹ ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಕಟ್ಟಿಗೆಹಳ್ಳಿ ಗ್ರಾಮದಲ್ಲಿ ತೋಟ ಬೆಂಕಿಗಾಹುತಿ 650 ಅಡಿಕೆ ಮರಗಳು ಸುಟ್ಟು ನಾಶ



ಜಗಳೂರು, ನ.29- ತಾಲ್ಲೂಕಿನ ಕಟ್ಟಿಗೆಹಳ್ಳಿ ಗ್ರಾಮದ ಶಾಂತಮ್ಮ ಎಂಬುವರಿಗೆ ಸೇರಿದ 1.35 ಎಕರೆಯಲ್ಲಿ ಬೆಳೆದಿದ್ದ 650 ಅಡಿಕೆ ಮರಗಳ ತೋಟಕ್ಕೆ ಶುಕ್ರವಾರ ಬೆಂಕಿ ತಗುಲಿ ಸಂಪೂರ್ಣ ಸುಟ್ಟು ನಾಶವಾಗಿರುವ ಘಟನೆ ನಡೆದಿದೆ.

ಮಧ್ಯಾಹ್ನ 12.30ರ ಸುಮಾರಿಗೆ ಬೋರ್‌ವೆಲ್ ಆನ್ ಆಗುತ್ತಿದ್ದಂತೆ ವಿದ್ಯುತ್ ಪ್ರವಹಿಸಿ ಬೆಂಕಿ ತಗುಲಿದೆ. ತೋಟಕ್ಕೆ ಕಳೆ ನಾಶಕ ಸಿಂಪಡಿಸಿದ್ದರಿಂದ ಹುಲ್ಲು, ಗಿಡ ಗಂಟಿಗಳು ಒಣಗಿದ್ದವು . ಹೀಗಾಗಿ ವಿದ್ಯುತ್ ಬಂದ ತಕ್ಷಣ ಶಾರ್ಟ್ ಸರ್ಕ್ಯೂಟ್‌ನಿಂದ ಈ ಘಟನೆ ಸಂಭವಿಸಿದೆ. ತಕ್ಷಣ ಸುತ್ತಮುತ್ತಲಿನ ರೈತರು ಸೇರಿ ಬೆಂಕಿ ನಂದಿಸುವ ಕಾರ್ಯಕ್ಕೆ ಮುಂದಾದರೂ ಸಹ ಪರಿಸ್ಥಿತಿ ಕೈಮೀರಿ ಇಡೀ ತೋಟವೇ ಸುಟ್ಟು ಕರಕಲಾಗಿದೆ ಎಂದು ಕೆ.ಎನ್.ಬಸವನಗೌಡ ಕಣ್ಣೀರು ಹಾಕಿದರು.

ಮೂರು ವರ್ಷಗಳಿಂದ ಬೆಳೆಸಲಾಗಿದ್ದ ಅಡಿಕೆ ತೋಟ ಘಟನೆಯಿಂದ ಲಕ್ಷಾಂತರ ರೂ ನಷ್ಟವಾಗಿದೆ. ಕೈಗೆ ಬಂದ ತುತ್ತು ಬಾಯಿಗೆ ಬಾರದಂತಾಯಿತು ಎಂದು ಗೋಳಾಡಿದ ದೃಶ್ಯ ಮನ ಕಲಕುವಂತಿತ್ತು.

ಘಟನೆ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ಬೆಸ್ಕಾಂ ಎಇಇ ಸುಧಾಮಣಿ, ಎಸ್‌ಓ ರಂಗನಾಥ್, ಪರಿಶೀಲನೆ ನಡೆಸಿದರು.

ವಿದ್ಯುತ್ ಮೇನ್ ವೈಯರ್ ಕಟ್ ಆಗಿದ್ದರೆ ಅದು ಬೆಸ್ಕಾಂ ಜವಾಬ್ದಾರಿಯಾಗಿರುತ್ತಿತ್ತು. ಸ್ಟಾಟರ್ ಡಬ್ಬಿಯಿಂದ ಮೋಟಾರ್‌ಗೆ ಸಂಪರ್ಕಿಸುವ ಔಟ್‌ಪುಟ್ ಸಪ್ಲೇಯ ವೈಯರ್ ಬ್ಲಾಸ್ಟ್‌ನಿಂದ ವಿದ್ಯುತ್ ಅವಘಡವಾದರೆ ಅದಕ್ಕೆ ನಾವು ಜವಾಬ್ದಾರರಲ್ಲ. ಇಲಾಖೆಯಿಂದ ತಪ್ಪಾಗಿಲ್ಲ. ಪರಿಹಾರ ಕೊಡಲು ಬರುವುದಿಲ್ಲ ಎಂದು ಪ್ರತಿಕ್ರಿಯೆ ನೀಡಿದರು.

ಶಾಸಕ ಬಿ.ದೇವೇಂದ್ರಪ್ಪ, ಅವಘಡ ಆಗಿರುವುದು ನಿಜ. ಮಾನವೀಯ ದೃಷ್ಟಿಯಿಂದ ಪರಿಗಣಿಸಿ. ಇಲಾಖೆ ನಿಯಮಗಳ ಅನುಸಾರ ನೊಂದ ರೈತನಿಗೆ ಪರಿಹಾರ ನೀಡಿ ಎಂದು ಸೂಚನೆ ನೀಡಿದ್ದಾರೆ.

ಕಂದಾಯ,ಇಲಾಖೆ ಧನಂಜಯ್, ತೋಟಗಾರಿಕಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಪ್ರಭುಶಂಕರ್, ಜಮೀನಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.


# ಟೈಲ್ಸ್, ಗ್ರಾನೈಟ್ ಕೂಲಿ ಕಾರ್ಮಿಕರಿಂದ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ. 29- ನಗರದ ಈರುಳ್ಳಿ ಮಾರ್ಕೆಟ್ ಆರ್.ಎಂ.ಸಿ.ಲಿಂಕ್ ರಸ್ತೆಯಲ್ಲಿರುವ ಟೈಲ್ಸ್ ಮತ್ತು ಗ್ರಾನೈಟ್ ಮಾರ್ಬಲ್ ಕೂಲಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದಿಂದ 69ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಧ್ವಜಾರೋಹಣ ವನ್ನು ಆರ್. ಮುರುಗನ್ ನೆರವೇರಿಸಿದರು.

ಸಂಘದ ಗೌರವ ಅಧ್ಯಕ್ಷರಾದ ಮಹಮದ್ ಜಾಬಿ, ಉಪಾಧ್ಯಕ್ಷರಾದ ಕೆ. ಅಕಿಮ್ ಸಾಬ್, ಶಂಕರ್ ಗಣೇಶ್, ವಾಜಿದ್, ಪಳಿನಿ ಸ್ವಾಮಿ ಬಸವರಾಜ್, ಮಹಮ್ಮದ್ ಯಾಕೂಬ್, ಕಾರ್ಯದರ್ಶಿ ಸಮೀವುಲ್ಲಾ, ಹೆಚ್. ಸುರೇಶ್ ಹಾಗೂ ನೂರಾರು ಕೂಲಿ ಕಾರ್ಮಿಕರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಚನ್ನಗಿರಿ ವಿರೂಪಾಕ್ಷಪ್ಪನವರಿಗೆ 'ನಾಗರಿಕ ಸನ್ಮಾನ'



ಮಹಾನಗರ ಪಾಲಿಕೆಯಿಂದ 69ನೇ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವು ಇಂದು ಸಂಜೆ 5.30ಕ್ಕೆ ನಗರ ಪಾಲಿಕೆ ಆವರಣದಲ್ಲಿ ನಡೆಯಲಿದ್ದು, ಈ ಸಂದರ್ಭದಲ್ಲಿ ಹೆಸರಾಂತ ದಾನಿಗಳಾದ ಚನ್ನಗಿರಿ ವಂಶದ ಚನ್ನಗಿರಿ ವಿರೂಪಾಕ್ಷಪ್ಪನವರಿಗೆ 'ನಾಗರಿಕ ಸನ್ಮಾನ' ನೀಡಿ ಗೌರವಿಸಲಾಗುವುದು.

ಒಂದು ಶತಮಾನ ಹತ್ತಿರದಲ್ಲೇ ಆಯುಷ್ಯ ಇರುವ ಇಂತಹ ಇಳಿ ವಯಸ್ಸಿನಲ್ಲೂ ಯುವಕರಿಗೆ ಮಾದರಿಯಂತೆ ನಗರದ ನಾಗರಿಕರಿಗೆ ಸಮಯ ಪ್ರಜ್ಞೆ ಮೂಡಿಸುವ ಗಡಿಯಾರ ಗೋಪುರ ಅಂದಿನಿಂದ ಇಂದಿನವರೆಗೂ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸಮಾಜ ಸೇವೆಗಳಲ್ಲಿ ನಿರಂತರವಾಗಿ ಕಠಿಣ ಪರಿಶ್ರಮದಿಂದ ಆರ್ಥಿಕ ಸಹಕಾರ, ಸಹಯೋಗ ನೀಡುತ್ತಿರುವ, ಬಡ ಮಕ್ಕಳಿಗೆ ವಿದ್ಯಾರ್ಥಿ ವೇತನ, ಉಚಿತ ಕಲ್ಯಾಣ ಮಂಟಪ, ಉಚಿತವಾಗಿ ವಿದ್ಯಾರ್ಥಿಗಳಿಗೆ ವಸತಿ, ಗೃಹ ಹೀಗೆ ನೂರಾರು ದಾನ ಧರ್ಮ ಮಾಡಿದ್ದಾರೆ.

99ನೇ ವಯಸ್ಸಿನ ಬಾಲ್ಯದಿಂದಲೇ ಚನ್ನಗಿರಿ ಮನೆತನ ನಿರ್ವಹಿಸುತ್ತಿರುವ ಚನ್ನಗಿರಿ ವಿರೂಪಾಕ್ಷಪ್ಪನವರಿಗೆ ಚನ್ನಗಿರಿ ವಂಶ, ರಾಜನಹಳ್ಳಿ ಮನೆತನ, ಆರ್ಯ ವೈಶ್ಯ ಸಮಾಜ, ಕಲಾಕುಂಚ, ಸಿನಿಮಾಸಿರಿ ಸೇರಿದಂತೆ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸರ್ವಸದಸ್ಯರು ಈ ಪ್ರಶಸ್ತಿಗೆ ಭಾಜನರಾಗುತ್ತಿರುವ ಇವರಿಗೆ ಅಭಿಮಾನದಿಂದ ಅಭಿನಂದಿಸಿದ್ದಾರೆ.

# ಅಂತರರಾಜ್ಯ ಭಾಷಾ ಬಾಂಧವ್ಯವು ಪರಸ್ಪರ ಅಭಿವೃದ್ಧಿಗೆ ಪೂರಕ



ದಾವಣಗೆರೆ, ನ.29- ರಾಜ್ಯ ರಾಜ್ಯಗಳ ನಡುವೆ ಭಾಷಾ ಬಾಂಧವ್ಯವೂ ಪರಸ್ಪರ ಅಭಿವೃದ್ಧಿಗೆ ಪೂರಕವಾಗಿದ್ದು, ರಾಷ್ಟ್ರಾಭಿವೃದ್ಧಿಗೂ ಇದು ಅವಶ್ಯ ಎಂದು ಹಿರಿಯ ಪತ್ರಕರ್ತ ಹೆಚ್. ಬಿ. ಮಂಜುನಾಥ ಅಭಿಪ್ರಾಯ ಪಟ್ಟರು.

ಅವರಿಂದು ದಾವಣಗೆರೆ ಕೇರಳ ಸಮಾಜದ ವತಿಯಿಂದ ಏರ್ಪಾಡಾಗಿದ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕರ್ನಾಟಕವಾಗಲೀ ಕೇರಳವಾಗಲೀ ಮೂಲತಃ ಹೊಂದಿರುವುದು ಭಾರತೀಯ ಸಂಸ್ಕೃತಿಯನ್ನು, ಭಾರತೀಯ ಸಂಸ್ಕೃತಿಯು ವಿಶ್ವದಲ್ಲೇ ಮೌಲ್ಯಯುತ ಸಂಸ್ಕೃತಿಯಾಗಿದೆ, ಮಾತೃಭಾಷೆಯೊಂದಿಗೆ ಮಾತ್ರ ಸಂಸ್ಕೃತಿಯೂ ಇರುತ್ತದೆ, ಹಾಗಾಗಿ ಮಾತೃಭಾಷೆಯ ಉಳಿವು ಅವಶ್ಯ, ಬಳಸಿದ ಭಾಷೆ ಉಳಿಯುತ್ತದೆ, ಕನ್ನಡ ಭಾಷೆ ಹಾಗೂ ಕರ್ನಾಟಕದ ಸಂಸ್ಕೃತಿ ಅತ್ಯುತ್ತಮವಾಗಿದ್ದು ಈ ರಾಜ್ಯದಲ್ಲಿ ಬಂದು ನೆಲೆಸಿದವರು ಇದನ್ನು ಮೈಗೂಡಿಸಿಕೊಂಡು ರಾಜ್ಯೋತ್ಸವ ಆಚರಿಸುತ್ತಿರುವುದು ಸಂತೋಷದ ವಿಷಯ ಎಂದರು. ಮುಖ್ಯ ಅತಿಥಿಗಳಾಗಿ ರಾಘವೇಂದ್ರ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಮೃತ್ಯುಂಜಯ ತಿಗಡಿಮಠ ಆಗಮಿಸಿದ್ದು, ದಾವಣಗೆರೆ ಕೇರಳ ಸಮಾಜದ ಅಧ್ಯಕ್ಷ ಪವಿತ್ರನ್ ಅಧ್ಯಕ್ಷತೆಯಲ್ಲಿ ಉಪಾಧ್ಯಕ್ಷೆ ಮಂಜುಶಾ ಸಿಮೋನ್, ಕಾರ್ಯದರ್ಶಿ ಮಣಿಕುಟ್ಟನ್, ಖಜಾಂಚಿ ಅನೀಶ್, ದಾವಣಗೆರೆ ಕೇರಳ ಸಮಾಜ ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ಪ್ರಸನ್ನಾ, ಕಾರ್ಯದರ್ಶಿ ಸೀಮಪ್ರಿಯ, ಖಜಾಂಚಿ ರೋಷಣಿ ಮುಂತಾದವರು ಉಪಸ್ಥಿತರಿದ್ದು, ಕಾರ್ಯಕ್ರಮದ ನಿರೂಪಣೆಯನ್ನು ಅನನ್ಯ ಹಿರೇಮಠ ಮಾಡಿದರೆ, ಸುಚಿತ್ರ ಮತ್ತು ಸಂಗಡಿಗರು ಪ್ರಾರ್ಥನಾ ಗೀತೆ ಹಾಡಿದರು.

ಕರ್ನಾಟಕ ಏಕೀಕರಣ ಕುರಿತಾಗಿ ಕೋಟೇಶ್ ಮಾತಾಡಿದರೆ, ಸಿಂಧೂ ಜಾಯ್ ಮತ್ತು ಸಂಗಡಿಗರು ಕನ್ನಡ ನೃತ್ಯ ಪ್ರದರ್ಶಿಸಿದರು. ಬಿ.ಆರ್.ಸುಚಿತ್ರ ವಂದನೆ ಸಲ್ಲಿಸಿದರು.

ರಾಘವೇಂದ್ರ ಸಮೂಹ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಕಾರ್ಯಕ್ರಮ ನೆರವೇರಿತು.

